

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 Issue : 69 Tuesday 19-11-2024 E-mail : maruti.b.hosamani76@gmail.com Page: 4 Price : Rs. 1/-


## ಸಾಂಕ್ರಾಮಿಕ ರೋಗಗಳ ತಡೆಗೆ ಮುಂಜಾಗ್ರತೆ ಕ್ರಮಗಳ ಪಾಲಿಸಿ: ಆರೋಗ್ಯ ನಿರೀಕ್ಷಣಾಧಿಕಾರಿ ಎಸ್.ಎಸ್. ಅಂಗಡಿ



**ಸಿಹಿ ಕಹಿ ಸುದ್ದಿ**



**ಮನ್ನಿಕಟ್ಟಿ :** ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟ, ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರ ಸಹಯೋಗದಲ್ಲಿ, ಮನ್ನಿಕಟ್ಟಿ ಗ್ರಾಮದಲ್ಲಿ ಸಾಂಕ್ರಾಮಿಕ ರೋಗಗಳ ಮುಂಜಾಗ್ರತೆ ಆರೋಗ್ಯ ಅರಿವು ಜನಜಾಗೃತಿ ಆಯೋಜಿಸಲಾಗಿತ್ತು, ಗ್ರಾಮದ ಬಸವರಾಜ ಜುಮನಾಳ ಸಾಂಕ್ರಾಮಿಕ ರೋಗಗಳ ವೈಜ್ಞಾನಿಕ ಮಾಹಿತಿ ಕರಪತ್ರ ಸಾರ್ವಜನಿಕರಿಗೆ ವಿತರಿಸುವ ಮುಖಾಂತರ ಜಾಗೃತಿಗೆ ಚಾಲನೆ ನೀಡದಿರು. ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ, ಎಸ್.ಎಸ್ ಅಂಗಡಿಯವರು, ರೋಗ ಬರದಂತೆ ಮುನ್ನೆಚ್ಚರಿಕೆ ಜಾಗೃತಿ ವಹಿಸಿಬೇಕು ಸೊಳ್ಳೆ ಉತ್ಪತ್ತಿ ತಾಣಗಳ ಸ್ವಚ್ಚತೆ ಮನೆ ಸುತ್ತಮುತ್ತ ಪರಿಸರ ಸ್ವಚ್ಚತೆ, ವಯಕ್ತಿಕ ಸ್ವಚ್ಚತೆ, ಶುದ್ಧ ನೀರು ಸೇವನೆ ಸಮತೋಲನ ಆಹಾರ ಸೇವನೆ ಮಾಡಬೇಕು ವಯಕ್ತಿಕ ಸ್ವಚ್ಚತೆ, ಸುತ್ತ ಮುತ್ತ ಪರಿಸರ ಸ್ವಚ್ಚತೆಯಿಂದ ಉತ್ತಮ ಆರೋಗ್ಯ ಸಂಪಾದನೆ. ಎಸ್.ಎಸ್ ಅಂಗಡಿ ಯಾವುದೇ ತರಹ ಜ್ವರ ಕಾಣಿಸಿದರೆ ಹತ್ತಿರದ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ಪರೀಕ್ಷೆ ಚಿಕಿತ್ಸೆ ಉಚಿತವಾಗಿರುತ್ತದೆ. ಮುಂಜಾಗ್ರತೆ ಕ್ರಮಗಳ ಪಾಲಿಸಿ ಆಸ್ಪತ್ರೆ ಅಲೆದಾಟ ತಪ್ಪಿಸಿಕೊಳ್ಳಿ ಎಂದರು ಗ್ರಾಮದಲ್ಲಿ ಸಂಶಯುತ ಮಲೇರಿಯಾ ರಕ್ತ ಲೇಪನ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳಿಸಲಾಯಿತು. ಸಾಂಕ್ರಾಮಿಕ ರೋಗಗಳ ಮುಂಜಾಗ್ರತೆ ಆರೋಗ್ಯ ಅರಿವು ಜನಜಾಗೃತಿ ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ವಿವಿಧ ಹಂತದ ಅಧಿಕಾರಿಗಳು, ಆಶಾ ಕಾರ್ಯಕರ್ತೆ ಸುವರ್ಣ ಗೌಡರ, ಗ್ರಾಮದ ಮುಖಂಡರು ಯುವಕರು ಶಾಲಾ ಮುದ್ದು ಮಕ್ಕಳು ಭಾಗವಹಿಸಿದ್ದರು.

## ಪಾಳು ಬಾವಿಯಲ್ಲಿ ಬಿದ್ದ ಬೆಕ್ಕಿನ ಪ್ರಾಣ ರಕ್ಷಿಸಿ ಮಾನವೀಯತೆ ಮೆರೆದ–ಅಗ್ನಿಶಾಮಕ ಸಿಬ್ಬಂದಿ, ಗ್ರಾಮಸ್ಥರು

**ಸಿಹಿ ಕಹಿ ಸುದ್ದಿ**

**ಜಕ್ಕಲಿ :** ಗದಗ ಜಿಲ್ಲೆಯ ರೋಣ ತಾಲೂಕಿನ ಸಮೀಪದ ಜಕ್ಕಲಿ ಗ್ರಾಮದ ಮೆಣಸಗಿಯವರ ಓಣಿಯ ಮಹೇಶ ಮೇಟಿ ಇವರ ಮನೆ ಹತ್ತಿರದ ಪಾಳುಬಿದ್ದ ಬಾವಿಯಲ್ಲಿ ಕಳೆದ ಒಂದು ವಾರದಿಂದ ಸಾಕು ಬೆಕ್ಕೊಂದು ಬಿದ್ದು ಸಾವು ಬದುಕಿನ ಮಧ್ಯೆ ಮೇಲಕ್ಕೆ ಬಾರದೇ ಹೋರಾಟ ನಡೆಸುತ್ತಿತ್ತು. ಈ ವಿಷಯ ಗೊತ್ತಾಗಿ ರೋಣ ಅಗ್ನಿ ಶಾಮಕ ಠಾಣಾಧಿಕಾರಿಗೆ ಸ್ಥಳೀಯ ಪತ್ರಕರ್ತ ಸಂಗಮೇಶ ಮೆಣಸಗಿ ರವಿವಾರ ಫೋನ್ ಕರೆ ಮಾಡಿ ಬೆಕ್ಕಿನ ಪ್ರಾಣ ರಕ್ಷಿಸುವಂತೆ ಮನವಿ ಮಾಡಿ ಕರೆಸಿ ಕೊಂಡಿದ್ದಾರೆ. ತಡಮಾಡದೆ

ರೋಣ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಗ್ಯಾನಪ್ಪ ಹನಮಪ್ಪ ಮಾಗಿಯವರು ತಮ್ಮ ಸಿಬ್ಬಂದಿ ಚಾಲಕ ಎಫ್.ಡಿ ನಂ. 3916 ಗೋವಿಂದ ಪೂಜಾರಿ ಯವರೊಂದಿಗೆ ಇವರು ಸ್ಥಳಕ್ಕೆ ಆಗಮಿಸಿ, ಗ್ರಾಮಸ್ಥರ ಸಹಕಾರ ದೊಂದಿಗೆ ಕಾರ್ಯಾಚರಣೆಗೆ ಮುಂದಾಗಿ ಬೆಕ್ಕನ್ನು ಬಾವಿಯಿಂದ ರಕ್ಷಿಸಿ ಮೇಲಕ್ಕೆ ಎತ್ತಿ ಮಾನವೀಯತೆ ಮೆರೆದ್ದಿದಾರೆ.

ಗ್ರಾಮದ ನಿವಾಸಿ ಕಳಕಪ್ಪ ಹೊಗರಿ ಮುಂದಾಗಿ ಸುಮಾರು 60 ಅಡಿ ಆಳದ ಈ ಬಾವಿಯಲ್ಲಿ ತಮ್ಮ ಪ್ರಾಣದ ಹಂಗು ತೊರೆದು ಹಗ್ಗದ ಸಹಾಯದಿಂದ ಬಾವಿ ಒಳಗೆ ಇಳಿದು



ಅಲ್ಲಲ್ಲಿಗೆ ಜಿಗಿಯುತ್ತಿದ್ದ ಬೆಕ್ಕು ಕೊನೆಗೆ ಪಡಕಿನಲ್ಲಿ ಸಿಲುಕಿದಾಗ ಅದಕ್ಕೆ ಗಟ್ಟಿಯಾಗಿ ಚೀಲ ಹಿಡಿದು ಒಳಕ್ಕೆ ತಳ್ಳಿಹಾಕಿ ಅದರ ಪ್ರಾಣ ಉಳಿಸಿದ್ದಾರೆ.

ಓಣಿಯ ಜನ ಬೆಕ್ಕಿನ ಗೋಳಾಟ ನೋಡಿ ಆಹಾರವಾಗಿ ನಿತ್ಯ ಹಾಲು ಮತ್ತು ಅನ್ನವನ್ನು ಬಕೀಟ ಮೂಲಕ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ಬೆಕ್ಕಿನ ರಕ್ಷಣಾ ಕಾರ್ಯದ ಫೋಟೋ ಹಾಗೂ ವಿಡಿಯೋ ಚಿತ್ರೀಕರಣದ ತುಣುಕುಗಳನ್ನು ಪತ್ರಕರ್ತ ಸಂಗಮೇಶ ಮೆಣಸಗಿ ತಮ್ಮ ಮೊಬೈಲ್ನಲ್ಲಿ ಸೆರೆ ಹಿಡಿದು ಪತ್ರಿಕಾ ಮಾಧ್ಯಮ, ದೃಶ್ಯ ಮಾಧ್ಯಮ ಪ್ರತಿ ನಿಧಿಗಳಿಗೆ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾಗಿ ತಿಳಿಸಿದ್ದಾರೆ.

ನಿನ್ನೆ ತಡರಾತ್ರಿ ಶನಿವಾರ ಸ್ಥಳೀಯ ನಿವಾಸಿ ಶೇಖರ ಯಾವಗಲ್ಲ ಇವರು ಪತ್ರಕರ್ತನಿಗೆ ವಿಷಯ ತಿಳಿಸಿದ್ದಾರೆ. ಆಗ ಸಂಗಮೇಶ ಅವರು ಗದಗ ಅರಣ್ಯಾಧಿಕಾರಿಗೆ ಫೋನ್ ಕರೆ ಮಾಡಿ ವಿನಂತಿಸಿದರು. ಅವರ ಮಾರ್ಗದರ್ಶನದಂತೆ ತಕ್ಷಣ ಅಗ್ನಿಶಾಮಕ ಅಧಿಕಾರಿಗಳಿಗೆ ಸಂಪರ್ಕಿಸಿದ್ದಾರೆ ಎನ್ನಲಾಗಿದೆ.

ಕಳಕಪ್ಪ ಹೊಗರಿ ಪ್ರಾಣ ಪಣಕ್ಕಿಟ್ಟು ಸುರಕ್ಷಿತವಾಗಿ ಬೆಕ್ಕಿನ ಪ್ರಾಣ ರಕ್ಷಿಸಿದ ಸಾಹಸಕ್ಕೆ ಗ್ರಾಮಸ್ಥರಿಂದ ಮೆಚ್ಚುಗೆಯ ಮಹಾಪೂರವೇ ಹರಿದು ಬಂದಿದೆ.

ಬಾವಿಯಿಂದ ಮೇಲೆತ್ತಿದ ಬೆಕ್ಕು ಚೀಲದಿಂದ ಹೊರ ತೆಗೆದ ತಕ್ಷಣ ದಿಕ್ಕೆಟ್ಟು ಓಡಿ ಹೋಗಿದೆ.

ಈ ರಕ್ಷಣಾ ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ದಳವರೊಂದಿಗೆ ಗ್ರಾಮಸ್ಥರಾದ ಶೇಖರ ಯಾವಗಲ್ಲ, ವಿನಾಯಕ ಉಮತಾರ, ವಿನಾಯಕ ಅಥಣಿ, ರವಿ ಆದಿ, ಸಮರ್ಥ ಮೇಟಿ, ಪ್ರಭುರಾಜ ರೇಣುಕಮಠ, ಮುತ್ತುರಾಜ ಮೇಟಿ, ವಿಶ್ವನಾಥ ಬುಳ್ಳಾ ಶಿವಾನಂದ ಯಾವಗಲ್ಲ ಸೇರಿದಂತೆ ಇನ್ನು ಅನೇಕರು ಇದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ ರೋಣ**

## ಲೋಕೋಪಯೋಗಿ ಇಲಾಖೆ ಎ.ಇ.ಇ–ಸಾಮುವೇಲಪ್ಪರ ನಿರ್ಲಕ್ಷ್ಯವೇ ಕಾರಣ

**ಸಿಹಿ ಕಹಿ ಸುದ್ದಿ**

**ಮಾನ್ವಿ :** ಎಸ್ಸಿ/ಎಸ್ಟಿ ಅನುದಾನ ದುರ್ಬಳಕೆ ಯಾಗುವುದಲ್ಲದೆ ಲೋಕೋಪಯೋಗಿ ಇಲಾಖೆ ಮಾನ್ವಿ ಅಭಿಯಂತರರು ರಾತ್ರೋ ರಾತ್ರಿ ಗುಣಮಟ್ಟ ದಲ್ಲಿರುವ ರಸ್ತೆಗೆ ಯಾಕೆ ಕಾಂಕ್ರೀಟ್ ಕಾಮಗಾರಿ ಮಾಡಿ ಹಣ ದುರ್ಬಳಕೆ ಮಾಡಿ ಕೊಳ್ಳುತ್ತೀರಾ ಎಂದು ಬಿಜೆಪಿ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಲು ಬಂದಾಗ ಕೈ ಕಾರ್ಯಕರ್ತರು ಹಾಗೂ ಬಿಜೆಪಿ ಮುಖಂಡರ ನಡುವೆ ಕೈ ಕೈ ಮಿಲಾಯಿಸುವ ವಾಗ್ವಾದ ನಡೆದ ಘಟನೆ ಜರುಗಿ–ತು.

ರಾಜ್ಯ ಸರಕಾರ ಅಭಿವೃದ್ಧಿ ಮಾಡುವುದನ್ನು ಸಹಿಸದೆ ಬಿಜೆಪಿ ಕಾರ್ಯಕರ್ತರು ಅಡ್ಡಿ ಪಡಿಸುತ್ತಿದ್ದಾರೆಂದು



ಆರೋಪಿಸಿದರೆ, ಎಸ್ಸಿ/ಎಸ್ಟಿ ಅನುದಾನವನ್ನು ಲೋಕೋಪಯೋಗಿ ಇಲಾಖೆ ಅಭಿಯಂತರರಾದ ಸಾಮುವೇಲಪ್ಪ ಹಾಗೂ ಗುತ್ತಿಗೆದಾರ ವೆಂಕೋಬ ಒಡೆ–ಯರ್ ಸೇರಿಕೊಂಡು ಗುಣಮಟ್ಟದ ರಸ್ತೆಗೆ ಕಾಂಕ್ರೀಟ್ ಹಾಕಿ ಹಣ ಗುಳುಂ ಮಾಡುವ ವ್ಯವಸ್ಥೆ ಎಂದು ಬಿಜೆಪಿ ಕಾರ್ಯಕರ್ತರು ರಾತ್ರೋ ರಾತ್ರಿ ಕೆಲಸ ಯಾಕೆ ಮಾಡುತ್ತೀರಾ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಮಾತಿಗೆ ಮಾತು ಬೆಳೆದು ಕೈ ಕೈ ಮಿಲಾಯಿಸುವ ಹಂತಕ್ಕೆ ತಲುಪಿದ ಹಿನ್ನೆಲೆಯಲ್ಲಿ ಮಾನ್ವಿ ಪೊಲೀಸ್ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಗಲಾಟೆಯನ್ನು ತಿಳಿ ಗೊಳಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ತೋಟಗಾರಿಕೆ ವಿ.ವಿ.ಗೆ ಒನಕೆ ಓಬ್ಬವ್ವನ ಹೆಸರ ಇಡಲು ಮನವಿ

**ಬಾಗಲಕೋಟ :** ಜಿಲ್ಲಾ ಕೇಂದ್ರದಲ್ಲಿ ಕನ್ನಡ ನಾಡಿನ ವೀರ ನಾರಿ ಒನಕೆ ಓಬ್ಬವ್ವನ ಸವಿ ನೆನಪಿಗಾಗಿ ಅವರ ಹೆಸರನ್ನು ಇಡಬೇಕು ಎಂದು ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಜಿಲ್ಲಾ ಘಟಕ ಶಾಸಕ ಹೆಚ್.ವೈ.ಮೇಟಿ ಅವರಿಗೆ ಮನವಿ ಸಲ್ಲಿಸಿತು.

ನವನಗರದ ಅಂಬೇಡ್ಕರ್ ಭವನದಲ್ಲಿ ಇಂದು ಜರುಗಿದ ಒನಕೆ ಓಬವ್ವ ಜಯಂತಿ ಕಾರ್ಯಕ್ರಮದಲ್ಲಿ ಮನವಿ ಸಲ್ಲಿಸಲಾಯಿತು.

ಸಮಸ್ತ ಛಲವಾದಿ ಜನಾಂಗವೂ ಸೇರಿದಂತೆ ಇಡಿ ದೇಶಕ್ಕೆ ಮಾದರಿಯಾಗಿರುವ ಛಲವಾದಿ ಸಮಾಜದ ಹೆಮ್ಮೆಯ ಹೆಣ್ಣುಮಗಳು ಇತಿಹಾಸದಲ್ಲಿ ಚಿರಸ್ಮರಣೀಯವಾಗಿದ್ದು,ಅವರ ಗೌರವಾರ್ಥವಾಗಿ ಬಾಗಲಕೋಟ ಜಿಲ್ಲಾ ಕೇಂದ್ರದಲ್ಲಿರುವ ತೋಟಗಾರಿಕೆ ವಿಶ್ವವಿದ್ಯಾಲಯ ಸೇರಿದಂತೆ ಯಾವದಾದರೂ ಪ್ರಮುಖವಾದ ಸ್ಥಳಗಳಿಗೆ ನಾಮಕರಣ ಮಾಡಲು ತಾವು ಸರಕಾರದ ಮೇಲೆ ಒತ್ತಡಹಾಕಬೇಕೆಂದು ಶಾಸಕರಿಗೆ ನೀಡಿದ ಮನವಿಯಲ್ಲಿ ಸಮಸ್ತ ಛಲವಾದಿ ಸಮಾಜದ ಪರವಾಗಿ ವಿನಂತಿಸಲಾಗಿದೆ.

ಈ ದಿಸೆಯಲ್ಲಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡುವಿರೆಂದು ನಂಬಿ ಓಬವ್ವನ ಜನ್ಮದಿನದಂದು ಈ ಮನವಿ ಸಲ್ಲಿಸುತ್ತಿರುವದಾಗಿ




ಶಾಸಕರಿಗೆ ಪ್ರೇಮನಾಥ ಗರಸಂಗಿ ತಿಳಿಸಿದರು. ಈ ಸಂದರ್ಭದಲ್ಲಿ ನಗರಸಭೆ ಸಭಾಪತಿ ಯಲ್ಲಪ್ಪ ನಾರಾಯಣಿ, ಜಿಲ್ಲಾ ಘಟಕದ ಗೌರವಾಧ್ಯಕ್ಷ ಬಸವರಾಜ ಚಲವಾದಿ,ಪ್ರಧಾನ ಕಾರ್ಯದರ್ಶಿ ಎನ್.ಬಿ.ಗಸ್ತಿ, ಶಿವಕುಮಾರ ಸಿಂಗೆ ಮೊದಲಾದವರು ಉಪಸ್ಥಿತರಿದ್ದರು.

## 16ನೇ ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನದ ಆಮಂತ್ರಣ ಪತ್ರಿಕೆ ಬಿಡುಗಡೆ



**ಮೂಡಲಗಿ :** ಮೂಡಲಗಿಯಲ್ಲಿ ನ.23 ಮತ್ತು 24 ರಂದು ನಡೆಯುವ 16ನೇ ಬೆಳಗಾವಿ ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಗೋಳಿಸೋಣ ಎಂದು ಸಮ್ಮೇಳನದ ದಿವ್ಯ ಸಾನ್ನಿಧ್ಯವಹಿಸುತ್ತಿರು ಮೂಡಲಗಿ ಶ್ರೀ ಶಿವಬೋಧರಂಗ ಮಠದ ಪೀಠಾಧಿಪತಿ ಶ್ರೀ ದತ್ತಾತ್ರಯಬೋಧ ಮಹಾಸ್ವಾಮೀಜಿ ಹೇಳಿದರು.

ಶ್ರೀ ಶಿವಬೋಧರಂಗ ಮಠದಲ್ಲಿ ಸಮ್ಮೇಳನದ ಪತ್ರಿಕೆಯನ್ನು ಬಿಡುಗಡೆಗೋಳಿಸಿ ಆಮಂತ್ರಣ ಪತ್ರಿಕೆಯನ್ನು ಸ್ವೀಕರಿಸಿ ಮಾತನಾಡಿದರು.

ಮಕ್ಕಳ ಸಾಹಿತಿ ಪ್ರೊ.ಸಂಗಮೇಶ ಗುಜಗೊಂಡ ಮಾತನಾಡಿ, ಸಮ್ಮೇಳನ ಯಶಸ್ವಿ ಆಗಬೇಕಾದರೆ ನಮ್ಮಗೆ ಸಾಧ್ಯವಾದ ಕೆಲಸವನ್ನು ಸಮರ್ಪಣಾ ಮನೋಭಾವದಿಂದ ಕೆಲಸ ಮಾಡಬೇಕು, ಈ ಸಮ್ಮೇಳನ ಬಹುಕಾಲ ಬಹುಜನರಿಗೆ ಸ್ಪೂರ್ತಿಯನ್ನು ಕೊಡತಕ್ಕಂತ ಸಮ್ಮೇಳನ ಆದರ ಬಹಳಷ್ಟು ಸಾರ್ಥಕತೆ ಈ ನಾಡಿಗೆ ಸಿಗತ್ತದೆ ಎಂದರು.

ಅರಭಾವಿ ಶಾಸಕರ ಆಪ್ತ ಸಹಾಯಕ ಸಿ.ಪಿ.ಯಕ್ಸಂಬಿ, ಕಸಾಪ ಮೂಡಲಗಿ ತಾಲೂಕಾ ಘಟಕದ ಅಧ್ಯಕ್ಷ ಡಾ.ಸಂಜಯ ಶಿಂಧಿಹಟ್ಟಿ ಮಾತನಾಡಿದರು.

ಈ ಸಂಧರ್ಭದಲ್ಲಿ ಶ್ರೀ ಶಿವಬೋಧರಂಗ ಮಠದ ಪೀಠಾಧಿಪತಿ ಶ್ರೀ ಶ್ರೀಧರಬೋಧ ಸ್ವಾಮೀಜಿ, ಕಸಾಪ ಪದಾಧಿಕಾರಿಗಳು, ಸಾಹಿತ್ಯಗಳು, ಗಣ್ಯರು, ಶಿಕ್ಷಕರು, ಕನ್ನಡಪರ ಸಂಘಟನೆ ಪದಾಧಿಕಾರಿಗಳು ಮತ್ತಿತರರು ಇದ್ದರು.

## ಕುಮಾರೇಶ್ವರ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಸ್ಪೆಶಲ್ ವಾರ್ಡ್ "ಕೃಷ್ಣಾ–ಘಟಪ್ರಭಾ" ಉದ್ಘಾಟನೆ

**ಬಾಗಲಕೋಟೆ :** ನಗರದ ಬಿವಿವಿ ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಯಲ್ಲಿ ನೂತನವಾಗಿ ನವೀಕ–ರಿಸಲಾದ, ಅತ್ಯಾಧುನಿಕ ಕೃಷ್ಣಾ ಮತ್ತು ಘಟಪ್ರಭಾ ಸ್ಪೆಶಲ್ ವಾರ್ಡಗಳನ್ನು ಉದ್ಘಾಟಿಸಲಾಯಿತು.

ಬಿವಿವಿ ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಸಿ.ಚರಂತಿಮಠ ಅವರು ಉದ್ಘಾಟಿಸಿ ಮಾತನಾಡಿ, ಕುಮಾರೇಶ್ವರ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆ ಅಧಿಕವಾಗುತ್ತಿದ್ದು, ರೋಗಿಗಳ ಹಿತದೃಷ್ಟಿಯಿಂದ ಹೆಚ್ಚುವರಿಯಾಗಿ ಹನ್ನೆರಡು ಕೊಠಡಿಗಳ ಎರಡು ಅತ್ಯಾಧುನಿಕ ಸ್ಪೆಶಲ್ ವಾರ್ಡಗಳನ್ನು ಸುಮಾರು ಎರಡು ಕೋಟಿ ವೆಚ್ಚದಲ್ಲಿ ನವೀಕರಿಸಲಾಗಿದ್ದು, ರೋಗಿಗಳಿಗೆ ಅಗತ್ಯವಾದ ಎಲ್ಲ ಸೌಲಭ್ಯಗಳನ್ನು ಇಲ್ಲಿ ಒದಗಿಸಲಾಗಿದೆ. ಜೊತೆಗೆ ರೋಗಿಗಳ ಕೈಗೆಟುಕುವಂತೆ ರಿಯಾಯಿತಿ ದರದಲ್ಲಿ ಕೊಠಡಿಗಳ ದರ ನಿಗದಿ ಮಾಡಲಾಗಿದೆ. ಸಾರ್ವಜನಿಕರು ಈ ಸೌಲಭ್ಯಗಳನ್ನು




ಪಡೆದುಕೊಳ್ಳಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ನೂತನ ಕೃಷ್ಣಾ ಮತ್ತು ಘಟಪ್ರಭಾವಾರ್ಡುಗಳಲ್ಲಿ ವಿಶೇಷಪೂಜೆನೆರವೇ–ರಿಸಲಾಯಿತು. ಕಾರ್ಯಕ್ರಮದಲ್ಲಿ ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷರಾದ ಅಶೋಕ ಸಜ್ಜನ (ಬೇವೂರ), ಕಟ್ಟಡ ವಿಭಾಗದ ಕಾರ್ಯಾಧ್ಯಕ್ಷರಾದ ಮಹೇಶ ಕಕರಡ್ಡಿ, ಮೆಡಿಕಲ್ ಕಾಲೇಜ್ ಪ್ರಾಚಾರ್ಯರಾದ ಡಾ.ಭುವನೇಶ್ವರಿ ಯಳಮಲಿ, ವೈದ್ಯಕೀಯ ಅಧೀಕ್ಷಕರಾದ ಡಾ. ಶ್ರೀರಾಮ ಕೋರಾ, ವಿವಿಧ ವಿಭಾಗಗಳ ಮುಖ್ಯಸ್ಥರು, ವೈದ್ಯರು, ಶುಶ್ರೂಷಕ ಸಿಬ್ಬಂದಿ ಹಾಜರಿದ್ದರು.

## ಅಂಗನವಾಡಿ ಕೇಂದ್ರದಲ್ಲಿ ಮಕ್ಕಳ ದಿನಾಚರಣೆ ಆಚರಣೆ



**ಕೃಷ್ಣರಾಜಪೇಟೆ :** ತಾಲೋಕಿನ ನಾಗೋರ್ನನಹಳ್ಳಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಮಕ್ಕಳ ದಿನಾಚರಣೆ ಅಂಗವಾಗಿ ಅಂಗನವಾಡಿ ಮಕ್ಕಳು ಕೇಕ್ ಕತ್ತರಿಸುವ ಮೂಲಕ ಸಡಗರದಿಂದ ಆಚರಣೆ ಮಾಡಲಾಯಿತು.

ನಂತರ ಮಾತನಾಡಿದ ಅಂಗನವಾಡಿ ಶಿಕ್ಷಕಿ ಈ ಶಿವಮ್ಮ ರವರು ದೇಶದ ಮೊಟ್ಟಮೊದಲ ಪ್ರಧಾನಿ ಎಂದೆ ಖ್ಯಾತಿ ಪಡೆದ ಪಂಡಿತ್ ಜವಾಹಲ್ ಲಾಲ್ ನೆಹರು ರವರ ಜನ್ಮ ದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಆಚರಣೆ ಮಾಡಲಾಗುತ್ತದೆ ಆದ್ದರಿಂದ ಎಲ್ಲಾ ಮಕ್ಕಳಿಗೂ ಸಹ ಮಕ್ಕಳ ದಿನಾಚರಣೆಯ ಶುಭಾಶಯಗಳನ್ನ ತಿಳಿಸಿದರು,

ಇದೇ ಸಂದರ್ಭದಲ್ಲಿ ಅಂಗನವಾಡಿ ಶಿಕ್ಷಕಿ ಈ ಶಿವಮ್ಮ ಸಹಾಯಕಿ ಸುಜಾತ ಹಾಗೂ ಅಂಗನವಾಡಿ ಮಕ್ಕಳು ಉಪಸ್ಥಿತರಿದ್ದರು,_

**ವರದಿ: ಎಸ್ ರವಿ ಹೊನ್ನೇನಹಳ್ಳಿ**

# ಪುರಸಭೆ ಮುಖ್ಯಾಧಿಕಾರಿ ವರ್ಗಾವಣೆಗೆ ಠರಾವ ಪಾಸ್



**ಇಂಡಿ :** ಪಟ್ಟಣದ ಪುರಸಭೆಯಲ್ಲಿ ಸೋಮವಾರ ನಡೆದ ಆಡಳಿತ ಮಂಡಳಿಯ ಸಾಮಾನ್ಯ ಸಭೆಯಲ್ಲಿ ಮುಖ್ಯಾಧಿಕಾರಿ ಮಹಾಂತೇಶ ಹಂಗರಗಿ ಅವರನ್ನು ವರ್ಗಾವಣೆ ಮಾಡುವಂತೆ 23 ಸದಸ್ಯರು ಸೇರಿ ಠರಾವು ಪಾಸ್ ಮಾಡಿದರು.

ಸಾಮಾನ್ಯ ಸಭೆ ಆರಂಭವಾಗುತ್ತಿದ್ದಂತೆ ಮುಖ್ಯಾಧಿಕಾರಿ ಮಹಾಂತೇಶ ಹಂಗರಗಿ ಹಿಂದಿನ ವರ್ಷದ ಲೆಕ್ಕಪತ್ರದ ಬಗ್ಗೆ ದಾಖಲಾತಿ ಪ್ರಕಾರ ಓದಿ ಹೇಳುತ್ತಿದ್ದಂತೆ ರೊಚ್ಚಿಗೆದ್ದ ಬಹುತೇಕ ಸದಸ್ಯರು, ಸದಸ್ಯರ ಗಮನಕ್ಕೆ ಬಾರದಂತೆ ಬಿಲ್ ತೆಗೆದಿದ್ದೀರಿ, ನಿಮಗೆ ಬೇಕಾದವರಿಗೆ, ನಿಮಗೆ ಕಮಿಷನ್ ಕೊಟ್ಟವರಿಗೆ ಟೆಂಡರ್ ನೀಡುತ್ತಿದ್ದೀರಿ, ಬೀಚಿಂಗ್ ಪೌಡರ್ ಖರೀದಿಯಲ್ಲಿ ಟೆಂಡರ್ ಕರೆಯದೆ ಮ್ಯಾನ್ಯುವಲ್ ಆಗಿ ಬಿಲ್ ತೆಗೆದಿದ್ದೀರಿ, ಅದೇ ಬೀಚಿಂಗ್ ಪೌಡರ್ ಕೆಲವೇ ತಿಂಗಳ ಹಿಂದೆ 47 ರೂಪಾಯಿಗೆ ಖರೀದಿ ಮಾಡಿದ್ದು ಈಗ 65 ರೂಪಾಯಿಗೆ ಖರೀದಿ ಮಾಡಿದ್ದೀರಿ ಎಂದು ತರಾಟೆಗೆ ತೆಗೆದುಕೊಂಡರು.

ಮುಖ್ಯಾಧಿಕಾರಿ ಸಮಜಾಯಿಸಲು ಮುಂದಾದಾಗ ಮುಖ್ಯಾಧಿಕಾರಿಗಳ ಮಾತಿಗೆ ಮನ್ನಣೆ ಮಾಡದ ಸದಸ್ಯರು ಇಲ್ಲಿ ಅಂಥಾ ಕಾನೂನು ನಡೆಯುತ್ತಿದೆ. ನಿಮಗೆ ಬೇಕಾದವರಿಗೆ ಬೇಕಾಬಿಟ್ಟಿ ಕೆಲಸ ನೀಡುತ್ತಿದ್ದೀರಿ, ಅವರಿಗೆ ಬಿಲ್ ಸಹ ಬೇಗನೆ ನೀಡುತ್ತೀರಿ, ಈ ಹಿಂದೆ ಕೆಲಸ ಮಾಡಿದ ಹಲವು ಗುತ್ತಿಗೆದಾರರ ಬಿಲ್ ಬಾಕಿ ಉಳಿಸಿಕೊಂಡಿದ್ದೀರಿ ಎಂದು ಆಕ್ರೋಶ ಭರಿತರಾದರು.

ಸಾರ್ವಜನಿಕರಿಗೆ ವಸತಿ ನಿವೇಶನ ಹಂಚಿಕೆಗೆ ಪುರಸಭೆಯ ವ್ಯಾಪ್ತಿಯಲ್ಲಿ ಭೂಮಿ ಬೇಕಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಸಭೆಯಲ್ಲಿ ತಿಳಿಸಿದರು. ಈ ವೇಳೆ ಪುರಸಭೆ ಸದಸ್ಯರಾದ ವಿಜಯಕುಮಾರ ಮೂರಮನ್, ಶಬೀರ್ ಖಾಜಿ ಜಂಟಿಯಾಗಿ ಮಾತನಾಡಿ ಸರ್ಕಾರದಿಂದ ಪ್ರತಿ ಎಕರೆಗೆ ಸಿಗುವ ಹಣದ ಬಗ್ಗೆ ಹೇಳಿ ಎಂದಾಗ ಮಧ್ಯಪ್ರವೇಶಿಸಿದ ಪುರಸಭೆ ಅಧಿಕಾರಿ ಪುರಸಭೆ ವ್ಯಾಪ್ತಿ ಅಂದರೆ 5 ಕಿ.ಮೀ. ಅಂತರವಿರಬೇಕು ಮತ್ತು ಎಕರೆಗೆ 15 ಲಕ್ಷ ನೀಡಲಾಗುತ್ತದೆ ಎಂದರು.

ಕೆಸರಾಳ ಎಲ್.ಟಿ.ಹತ್ತಿರ ಅರಣ್ಯಪ್ರದೇಶದ 10 ಎಕರೆ ಭೂಮಿ ಇದ್ದು, ಅದನ್ನು ಶಾಸಕರ ಗಮನಕ್ಕೆ ತಂದಿದ್ದೇನೆ. ಶಾಸಕರು ಸರ್ಕಾರದ ಮಟ್ಟದಲ್ಲಿ ಮಾಡಿಸುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಸದಸ್ಯ ಅನೀಲಗೌಡ ಬಿರಾದಾರ ಮಾತನಾಡಿ, ಪುರಸಭೆ ಅಧಿಕಾರಿ ಮಹಾಂತೇಶ ಹಂಗರಗಿ ಅವರ ಅಧಿಕಾರದ ನಡೆ ಸರಿಯಾಗಿಲ್ಲ. ನಗರದಲ್ಲಿ ಯಾವುದೇ ಕೆಲಸಗಳನ್ನು ಮಾಡುತ್ತಿಲ್ಲ. 5-6 ತಿಂಗಳಿಂದ ಹಣಗಳಿಸುವ ದಂಧೆಯಲ್ಲಿ ತೊಡಗಿದ್ದಾರೆ ಎಂದು ಆರೋಪಿಸಿದರು.

ಸಾರ್ವಜನಿಕರು ಮನೆ ಕಟ್ಟಡಕ್ಕಾಗಿ ಅರ್ಜಿ ಸಲ್ಲಿಸಿದರೆ ಅವರಿಗೆ ಅನುಮತಿ ನೀಡುತ್ತಿಲ್ಲ. ಉತಾರಗಳಿಗಾಗಿ ಬಂದ ಜನರಿಗೆ ಇಲ್ಲಸಲ್ಲದ ಕಾಗದಪತ್ರಗಳು ಕೇಳಿ ಸತಾಯಿಸುತ್ತಿದ್ದಾರೆ. ಕೂಡಲೇ 23 ಸದಸ್ಯರೆಲ್ಲ ಒಕ್ಕೊರಲಿನ ಅಭಿಪ್ರಾಯದೊಂದಿಗೆ ಮುಖ್ಯಾಧಿಕಾರಿ ಬದಲಾವಣೆ ಮಾಡಲು ಠರಾವು ಪಾಸು ಮಾಡೋಣ ಎನ್ನುತ್ತಿದ್ದಂತೆ ಸರ್ವ ಸದಸ್ಯರು ಸಮ್ಮತಿಸಿ ಠರಾವು ಪಾಸು ಮಾಡಲು ಸೂಚಿಸಿದರು.

ಪುರಸಭೆ ಅಧ್ಯಕ್ಷ ಲಿಂಬಾಜಿ ರಾಠೋಡ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಜಹಾಂಗೀರ ಸೌದಾಗರ ಘನ ಉಪಸ್ಥಿತಿಯಲ್ಲಿ ಸಾಮಾನ್ಯ ಸಭೆ ನಡೆಯಿತು.

ಉಮೇಶ ದೇಗಿನಾಳ, ಮುಸ್ತಾಕ ಇಂಡಿಕರ್, ಇಸ್ಮಾಯಿಲ್ ಅರಬ, ಅಯೂಬ ಬಾಗವಾನ, ಅಸ್ಲಂ ಕಡಣಿ, ವಿಜಯಕುಮಾರ ಮೂರಮನ್, ರೇಣುಕಾ ಉಟಗಿ, ಸಂಗೀತಾ ಕರಕಟ್ಟಿ, ಬನ್ನೆಮ್ಮಾ ಹದರಿ, ಶಬೀರ್ ಖಾಜಿ, ಶೈಲಜಾ ಪೂಜಾರಿ, ಇಇ ಅಶೋಕ ಚಂದನ್, ಅಸ್ಲಂ ಖಾದಿರ್, ಚಂದು ಕಾಲೇಬಾಗ, ಪ್ರವೀಣ ಸೋನಾರ್, ಹುಚ್ಚಪ್ಪ ಶಿವಶರಣ, ಸೋಮು ನಾಯಕ ಇತರರಿದ್ದರು.

# ಈರುಳ್ಳಿ ಬೆಳೆವಿಮೆ ನೋಂದಾಯಿಸಿಕೊಳ್ಳಲು ಮನವಿ

**ವಿಜಯಪುರ :** 2024-25ನೇ ಸಾಲಿನಲ್ಲಿ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯಡಿ ಈರುಳ್ಳಿ ಬೆಳೆವಿಮಾ ಯೋಜನೆಯಡಿಯಲ್ಲಿ ನೋಂದಾಯಿಸಿಕೊಳ್ಳಲು ವಿಜಯಪುರ ತೋಟಗಾರಿಕೆ ಉಪನಿರ್ದೇಶಕರು ಮನವಿ ಮಾಡಿದ್ದಾರೆ.

ಹಿಂಗಾರು ಹಂಗಾಮಿನ ಈರುಳ್ಳಿ ಬೆಳೆವಿಮೆಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:30-11-2024 ಹಾಗೂ ಬೇಸಿಗೆ ಹಂಗಾಮಿನ ಈರುಳ್ಳಿ ಬೆಳೆಯ ನೋಂದಾಯಿಸಿಕೊಳ್ಳಲು ದಿನಾಂಕ 01-01-2025 ರಿಂದ 28-2-2025 ರವರೆಗೆ ಬೆಳೆವಿಮೆ ನೋಂದಾಯಿಸಿಕೊಳ್ಳಬಹುದಾಗಿದೆ. ಬೆಳೆವಿಮೆ ನೋಂದಣಿಗಾಗಿ, ಆಧಾರ್ ಕಾರ್ಡ್ ಝೆರಾಕ್ಸ್, ಪಹಣಿ ಪತ್ರಿಕೆ ಹಾಗೂ ಬ್ಯಾಂಕ್ ಪಾಸ್ ಪ್ರತಿಯೊಂದಿಗೆ ಗ್ರಾಮ ಒನ್, ಸಿಎಸ್‌ಸಿ ಸೆಂಟರ್ ಹಾಗೂ ಹತ್ತಿರದ ಬ್ಯಾಂಕ್‌ಗಳಲ್ಲಿ ನೋಂದಾಯಿಸಿಕೊಳ್ಳಬಹುದು.

2024-25ನೇ ಸಾಲಿನಲ್ಲಿ ಹಿಂಗಾರು ಹಂಗಾಮಿನಲ್ಲಿ ಚಡಚಣ, ಮುದ್ದೇಬಿಹಾಳ, ಬಬಲೇಶ್ವರ, ಬಸವನ ಬಾಗೇವಾಡಿ, ಕೋಲಾರ, ನಿಡಗುಂದಿ, ಸಿಂದಗಿ ತಾಲೂಕು ಹಾಗೂ ಅವುಗಳ ಹೋಬಳಿಗಳ ವ್ಯಾಪ್ತಿಯಲ್ಲಿ ಪ್ರತಿ ಎಕರೆಗ ರೂ.1,610 ಹಾಗೂ 2024-25ನೇ ಸಾಲಿನ ಬೇಸಿಗೆ ಹಂಗಾಮಿನಲ್ಲಿ ಬಸವನ ಬಾಗೇವಾಡಿ, ಕೋಲಾರ ತಾಲೂಕಿನ ಹಾಗೂ ಅವುಗಳ ಹೋಬಳಿಯ ಈರುಳ್ಳಿ ಬೆಳೆಯ ಬೆಳೆ ವಿಮೆಗಾಗಿ ಪ್ರತಿ ಎಕರೆಗೆ 1,610 ರೂ. ಕಂತು ಪಾವತಿಸಿ ನೋಂದಾಯಿಸಿಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ತೋಟಗಾರಿಕೆ ಇಲಾಖೆ, ರೈತ ಸಂಪರ್ಕ ಕೇಂದ್ರ ಹಾಗೂ ಬ್ಯಾಂಕ್ ಶಾಖೆಯನ್ನು ಹಾಗೂ ಮೊಬೈಲ್ ಸಂಖ್ಯೆ: 7795927064 ಕ್ಕೆ ಸಂಪರ್ಕಿಸುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತುಳಸಿ ವಿವಾಹ




**ತುಳಸಿ ವಿವಾಹದ ನಿಮಿತ್ತ ಸನಾತನ ಸಂಸ್ಥೆಯ ಲೇಖನ**

**ತಿಥಿ :**
ಈ ವಿಧಿಯನ್ನು ಕಾರ್ತಿಕ ಶುಕ್ಲ ದ್ವಾದಶಿಯಿಂದ ಹುಣ್ಣಿಮೆಯ ವರೆಗಿನ ಯಾವುದಾದರೊಂದು ದಿನ ಮಾಡುತ್ತಾರೆ.

**ಪೂಜೆ :**
ತುಳಸಿಯೊಂದಿಗೆ ಶ್ರೀವಿಷ್ಣುವಿನ (ಬಾಲಕೃಷ್ಣನ ಮೂರ್ತಿಯ) ವಿವಾಹವನ್ನು ಮಾಡುವುದೇ ತುಳಸಿ ವಿವಾಹದ ವಿಧಿಯಾಗಿದೆ. ವಿವಾಹದ ಹಿಂದಿನ ದಿನ ತುಳಸಿ ಬೃಂದಾವನವನ್ನು ಬಣ್ಣ ಹಚ್ಚಿ ಅಲಂಕರಿಸುತ್ತಾರೆ. ಬೃಂದಾವನದಲ್ಲಿ ಕಬ್ಬು, ಚೆಂಡು ಹೂವುಗಳನ್ನು ಹಾಕುತ್ತಾರೆ ಮತ್ತು ಅದರ ಬುಡದಲ್ಲಿ ಹುಣಸೇಕಾಯಿ ಮತ್ತು ನೆಲ್ಲಿಕಾಯಿಗಳನ್ನು ಇಡುತ್ತಾರೆ. ಈ ವಿವಾಹದ ವಿಧಿಯನ್ನು ಸಾಯಂಕಾಲ ಮಾಡುತ್ತಾರೆ.

**ವೈಶಿಷ್ಟ್ಯ :**
ತುಳಸಿ ವಿವಾಹದ ಬಳಿಕ ಚಾತುರ್ಮಾಸದಲ್ಲಿ ಕೈಗೊಂಡ ಎಲ್ಲ ವ್ರತಗಳನ್ನು ಸಮಾಪ್ತಗೊಳಿಸುತ್ತಾರೆ. ಚಾತುರ್ಮಾಸದಲ್ಲಿ ಯಾವ ಪದಾರ್ಥಗಳನ್ನು ವರ್ಜ್ಯ ಮಾಡಿರುತ್ತಾರೆಯೋ, ಆ ಪದಾರ್ಥಗಳನ್ನು ಬ್ರಾಹ್ಮಣರಿಗೆ ದಾನ ಮಾಡಿ ನಂತರ ತಾವೂ ಸೇವಿಸುತ್ತಾರೆ.

ದೀಪಾವಳಿ ಹಬ್ಬದ ನಂತರ ಬರುವ ಇನ್ನೊಂದು ಹಬ್ಬ ತುಳಸಿ ಹಬ್ಬ ಅಥವಾ ತುಳಸಿ ಮದುವೆ. ಕಾರ್ತಿಕ ಮಾಸದ ಶುಕ್ಲ ಪಕ್ಷದ ದ್ವಾದಶಿಯಂದು ಈ ಪವಿತ್ರದಿನವನ್ನು ತುಳಸಿ ಮದುವೆಯನ್ನಾಗಿ ಆಚರಿಸುವರು. ಅಂದಿನ ದಿನ ರೇವತಿ ನಕ್ಷತ್ರದ ಯೋಗವಿದ್ದರೆ ಇನ್ನೂ ಶ್ರೇಷ್ಠ.

ಉತ್ಥಾನವೆಂದರೆ ಏಳು ಎಂಬರ್ಥ. ಶ್ರೀಮನ್ನಾರಾಯಣನು ತನ್ನ ನಿದ್ರಾವಸ್ಥೆಯಿಂದ ಹೊರ ಬಂದು ತನ್ನ ಭಕ್ತಾದಿಗಳಿಗೆ ದರ್ಶನ ಕೊಡುವನೆಂಬ ಪ್ರತೀತಿ ಇದೆ. ಆ ಭಗವಂತನು ಹಾಲ್ಗಡಲಿನಲ್ಲಿ ಮಲಗಿದ್ದು, ಅವನನ್ನು ಸುಪ್ರಭಾತ ಸೇವೆಯ ಮೂಲಕ ಎಬ್ಬಿಸುವುದರಿಂದ ಈ ವ್ರತವನ್ನು ಕ್ಷೀರಾಬ್ಧಿ ವ್ರತವೆಂದೂ ಕರೆಯುವರು.

ಕಾರ್ತಿಕ ಶುಕ್ಲ ಪಕ್ಷ ಏಕಾದಶಿಯಂದು ಪ್ರಾತಃಕಾಲದಲ್ಲಿ ಕುಂಭದಾನವನ್ನು ಮಾಡಿ ಉಪವಾಸ ವ್ರತವನ್ನಾಚರಿಸಬೇಕು. ಅಂದು ಸೋಮವಾರವಾಗಿದ್ದು, ಉತ್ತರಾಷಾಢ ನಕ್ಷತ್ರವಾಗಿದ್ದರೆ ತುಂಬಾ ಶ್ರೇಷ್ಠ. ಅಂದಿನ ರಾತ್ರಿಯಂದೇ ವಿಷ್ಣುವನ್ನು ಎಬ್ಬಿಸಬೇಕು. ಹಾಗೆ ಎಬ್ಬಿಸುವಾಗ ಈ ಕೆಳಕಂಡ ವೇದೋಕ್ತ ಮಂತ್ರವನ್ನು ಹೇಳಬೇಕು.

**ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಮ್?**
**ಸಮೂಢಮಸ್ಯ ಪಾಗೇಂಸುರೇ??**

ಮಳೆಗಾಲದ ನಾಲ್ಕು ತಿಂಗಳುಗಳಲ್ಲಿ ಮಳೆಯು ಹೆಚ್ಚಾಗಿದ್ದು, ಜನಜೀವನ ಅಸ್ತವ್ಯಸ್ತವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಸನ್ಯಾಸಿಗಳು ದೇಶ ಸಂಚಾರವನ್ನು ಮಾಡದೇ ಒಂದೆಡೆಯಲ್ಲಿ, ಚಾತುರ್ಮಾಸ್ಯ ವ್ರತವನ್ನು ಆಚರಿಸುವರು. ಆ ಸಂದರ್ಭದಲ್ಲಿ ಶ್ರೀಮನ್ನಾರಾಯಣನು ನಿದ್ರಾವಸ್ಥೆಯಲ್ಲಿರುತ್ತಾನೆಂದೂ, ಚಾತುರ್ಮಾಸ್ಯ ಮುಗಿಯುವ ವೇಳೆಯಲ್ಲಿ ಅವನನ್ನು ಎಬ್ಬಿಸಲು ಸುಪ್ರಭಾತವನ್ನು ಹಾಡುವರು. ಅದು ಸಂಕ್ಷಿಪ್ತವಾಗಿ ಹೀಗಿದೆ.

**ಉತ್ತಿಷ್ಠೋತ್ತಿಷ್ಠ ಗೋವಿಂದ ಉತ್ತಿಷ್ಠ ಗರುಡಧ್ವಜ?**
**ಉತ್ತಿಷ್ಠ ಕಮಲಾಕಾಂತ ತ್ರೈಲೋಕ್ಯಂ ಮಂಗಲಂಕುರು??**

ಚಾತುರ್ಮಾಸ್ಯದ ಕೊನೆಯ ಹಂತದ ಏಕಾದಶಿಯ ರಾತ್ರಿ ಒಂದು ಕುಂಭದಲ್ಲಿ ಉದ್ದಿನಕಾಳಿನ ಪ್ರಮಾಣದ ಚಿನ್ನದ ಮೀನಿನ ಮೂರ್ತಿಗೆ ಪಂಚಾಮೃತ ಅಭಿಷೇಕ ಮಾಡಿ, ಪೂಜಿಸಿ, ಅಂದು ಜಾಗರಣೆಯನ್ನು ಮಾಡಿ, ದ್ವಾದಶಿಯ ಬೆಳಗ್ಗೆ ಮತ್ತೆ ಪೂಜಿಸಿ ಬ್ರಾಹ್ಮಣರಿಗೆ ದಕ್ಷಿಣೆ ಸಮೇತವಾಗಿ ದಾನ ಮಾಡಬೇಕು.

ಅಂದು ಧಾತ್ರೀ ದೇವಿಯ ಸ್ವರೂಪವಾದ ನೆಲ್ಲಿಯ ಮರವನ್ನು ಪೂಜಿಸಿ, ಧಾತ್ರೀ, ಶಾಂತಿ, ಮೇಧಾ, ಪ್ರಕೃತಿ, ವಿಷ್ಣುಪತ್ನೀ, ಮಹಾಲಕ್ಷ್ಮೀ, ರಮ್ಯಾ, ಕಮಲಾ, ಇಂದಿರಾ, ಲೋಕಮಾತಾ, ಕಲ್ಯಾಣೀ, ಕಮನೀಯಾ, ಸಾವಿತ್ರೀ, ಜಗದ್ಧಾತ್ರೀ, ಗಾಯತ್ರೀ, ಸುಧೃತೀ, ಅವ್ಯಕ್ತಾ, ವಿಶ್ವರೂಪಾ, ಸುರೂಪಾ ಮತು ಅಬ್ಧಿಭವಾ ಎಂಬ ಹೆಸರುಗಳಿಂದ ಅರ್ಚಿಸಬೇಕು. ಕೆಲವು ಮನೆಗಳಲ್ಲಿ ತುಲಸೀ ಮತ್ತು ಶ್ರೀಮನ್ನಾರಾಯಣನಿಗೆ ವಿವಾಹವನ್ನು ಮಾಡುವ ಪದ್ಧತಿಯೂ ಇದೆ.

ಭಗವಂತನಿಗೆ ಪುರುಷಸೂಕ್ತದಿಂದಲೂ ಮತ್ತು ತುಲಸಿ ದೇವಿಗೆ ಶ್ರೀಸೂಕ್ತದಿಂದಲೂ ಅರ್ಚನೆ ಮಾಡಬೇಕು. ತುಲಸಿಯ ಎದುರಿಗೆ ಶ್ರೀ ಕೃಷ್ಣನ ಪ್ರತಿಮೆಯನ್ನಿರಿಸಿ ಮಧ್ಯದಲ್ಲಿ ಅಂತರಪಟವನ್ನು ಹಿಡಿದು ಮದುವೆ ಮಾಡಿಸುತ್ತಾರೆ. ನೆಲ್ಲಿಯಲ್ಲಿ ವಾತ ಪಿತ್ತಗಳನ್ನು ಶಮನ ಮಾಡುವ ಶಕ್ತಿಯಿದೆ. ರಕ್ತದೋಷವನ್ನೂ ನಿವಾರಿಸುವ ಶಕ್ತಿಯಿದೆ. ಅದರ ಹಾರವನ್ನು ತುಲಸೀ ಮತ್ತು ನಾರಾಯಣನಿಗೆ ಹಾಕುವುದು ಪದ್ಧತಿ. ಪ್ರಾತಃಕಾಲದಲ್ಲಿ ಪೂಜೆಯನ್ನು ಮಾಡಿದರೆ, ಸಂಜೆಯ ಸಮಯದಲ್ಲಿ ತುಲಸಿ ವಿವಾಹವನ್ನು ಮಾಡುವರು.

**(ಆಧಾರ : ಸನಾತನ ಸಂಸ್ಥೆ ನಿರ್ಮಿಸಿದ ಗ್ರಂಥ 'ಹಬ್ಬ, ಧಾರ್ಮಿಕ ಉತ್ಸವ ಮತ್ತು ವ್ರತಗಳು')**

# ಹಸಿರು ಗ್ರಾಮ ಕನಸು ಸಾಕಾರಕ್ಕೆ ಒತ್ತು: ಗ್ರಾಮ ಪಂಚಾಯತಿಗೊಂದು ಉದ್ಯಾನವನ



**ಜಿಲ್ಲೆಯಲ್ಲಿ ಹಸಿರೀಕರಣದ ಸಂಕಲ್ಪ**

ವಿಜಯಪುರದಲ್ಲಿ ಅರಣ್ಯೀಕರಣ ಸಂಕಲ್ಪ ಮಾಡಲಾಗಿದೆ. ಹಸಿರು ಗ್ರಾಮ ಕನಸಿನ ಯೋಜನೆ ಸಾಕಾರಕ್ಕೆ ಜಿಲ್ಲಾ ಪಂಚಾಯತಿ, ತಾಲೂಕ ಪಂಚಾಯತಿ, ಗ್ರಾಮ ಪಂಚಾಯತಿಗಳು ಒತ್ತು ನೀಡಿವೆ. ಪ್ರತಿ ತಾಲ್ಲೂಕುಗಳಲ್ಲೂ ಸಸ್ಯಕ್ಷೇತ್ರಗಳನ್ನು ಈಗಾಗಲೇ ಸ್ಥಾಪಿಸಲಾಗಿದೆ. ಜಿಲ್ಲೆಯ 211 ಗ್ರಾಮ ಪಂಚಾಯತಿಗಳನ್ನೂ ಹಸಿರು ಗ್ರಾಮಗಳನ್ನಾಗಿ ಪರಿವರ್ತಿಸಲು ಜಿಲ್ಲಾ ಪಂಚಾಯತಿ ಉದ್ದೇಶಿಸಿದೆ. ಅರಣ್ಯ ಇಲಾಖೆಯೊಂದಿಗೆ ಪ್ರತಿ ಗ್ರಾಮ ಪಂಚಾಯತಿಗಳೂ ಕೈಜೋಡಿಸಿವೆ. ಅರಣ್ಯೀಕರಣ ಕಾಮಗಾರಿಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಿಷಿ ಆನಂದ ಅವರು ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಜಿಲ್ಲೆಯಲ್ಲಿ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣ 1794.76 ಹೆಕ್ಟೇರ್ ನಷ್ಟು ಇದೆ. ಇದರಲ್ಲಿ ಲಭ್ಯವಿರುವ ಸರ್ಕಾರಿ ಜಮೀನು ಒಟ್ಟು 1053.29 ಹೆಕ್ಟೇರ್ ಇದೆ. ಈ ಸರ್ಕಾರಿ ಜಮೀನಿನಲ್ಲಿ ಒಟ್ಟು 754.52 ಹೆಕ್ಟೇರ್ ನಲ್ಲಿ 2.49 ಲಕ್ಷ ಸಸಿಗಳನ್ನು ನೆಟ್ಟು ಪೋಷಿಸಲಾಗುತ್ತಿದೆ. ಜಿಲ್ಲೆಗೆ 2024-25ನೇ ಸಾಲಿನಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ 4.50ಲಕ್ಷ ಮಾನವ ದಿನಗಳ ಗುರಿ ನಿಗದಿಪಡಿಸಿದ್ದು, ಈಗಾಗಲೇ 2.66 ಲಕ್ಷ ಮಾನವ ದಿನಗಳನ್ನು ಸೃಜಿಸಲಾಗಿದೆ.

**ಸಸ್ಯ ಕ್ಷೇತ್ರಗಳಲ್ಲಿ ಸಸಿಗಳ ನಾಟಿ:**

ಜಿಲ್ಲೆಯಲ್ಲಿ ಒಟ್ಟು 5 ವಲಯಗಳಾದ ವಿಜಯಪುರ ತಾಲೂಕಿನ ಹಡಗಲಿ, ಇಂಡಿ ತಾಲೂಕಿನ ಬಬಲಾದ, ಬಸವನ ಬಾಗೇವಾಡಿ ತಾಲೂಕಿನ ಮಣೂರ, ಸಿಂದಗಿ ತಾಲೂಕಿನ ಬಬಲೇಶ್ವರ ಹಾಗೂ ಮುದ್ದೇಬಿಹಾಳ ತಾಲೂಕಿನ ಕೋಳೂರ ಗ್ರಾಮಗಳಲ್ಲಿ ಸಸ್ಯ ಕ್ಷೇತ್ರಗಳಿದ್ದು, ಇದರಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ 56,468 ಸಸಿಗಳನ್ನು ಬೆಳೆಸಲಾಗಿದೆ. ಇಲಾಖೆಯ ಇತರೆ ಯೋಜನೆಗಳಡಿ 55,360 ಸಸಿಗಳನ್ನು ಬೆಳೆಸಲಾಗಿದೆ. ಬೆಳೆಸಿರುವ ಸಸಿಗಳನ್ನು ರೈತರಿಗೆ ಹಾಗೂ ಸಾರ್ವಜನಿಕರಿಗೆ ಒಟ್ಟು 60,705 ಸಸಿಗಳನ್ನು ವಿತರಿಸಲಾಗಿದೆ. ಅಷ್ಟೇ ಅಲ್ಲದೇ ಇನ್ನೂ 1,00,748 ಸಸಿಗಳ ಅವಶ್ಯಕತೆ ಇದ್ದು, ಮುಂಬರುವ ದಿನಗಳಲ್ಲಿ ಅವಶ್ಯವಿರುವ ಸಸಿಗಳನ್ನು ಬೆಳೆಸಿ ನಾಟಿ ಮಾಡಲಾಗುವುದು.

**ಮುಂಗಾರು ಅರಣ್ಯ :**

ಮುಂಗಾರು ಕೃಷಿ ಚಟುವಟಿಕೆಗರಿಗೆದರಿರುವಂತೆ ಜಿಲ್ಲೆಯಲ್ಲಿ ಮುಂಗಾರು ಅರಣ್ಯ ಚಟುವಟಿಕೆ ಶುರುವಾಗಿದೆ. ಸಸಿ ನೆಟ್ಟು ಪೋಷಿಸುವ ಕೆಲಸ ಎಲ್ಲೆಡೆಸಾಗಿದೆ. ಹೊಲ-ಗದ್ದೆಗಳಲ್ಲಿ ಕೃಷಿಬೆಳೆಗಳ ಬಿತ್ತನೆ, ನಾಟಿ ಕಾರ್ಯದಂತೆಯೇ ಅರಣ್ಯ ಪ್ರದೇಶ, ರಸ್ತೆ ಬದಿಗಳು, ಶಾಲೆ-ಅಂಗನವಾಡಿ ಆವರಣಗಳು, ಆಟದ ಮೈದಾನಗಳ ಸುತ್ತ-ಮುತ್ತ, ಸರಕಾರಿ ಕಛೇರಿಗಳು ಸೇರಿದಂತೆ ಅವಕಾಶ ಇದ್ದಲ್ಲೆಲ್ಲಾ ಸಸಿಗಳ ನಾಟಿ ಮಾಡುವ ಕಾರ್ಯ ಪ್ರಾರಂಭಗೊಂಡಿದೆ.

**1.00 ಲಕ್ಷ ಸಸಿಗಳು:**

ಜಿಲ್ಲಾ ಪಂಚಾಯತಿ ಹಾಗೂ ಸಾಮಾಜಿಕ ವಲಯ ಅರಣ್ಯ ಇಲಾಖೆ ವತಿಯಿಂದ ಬೆಳೆಸಿದಂತಹ ಒಟ್ಟು 1.00 ಲಕ್ಷ ಸಸಿಗಳನ್ನು ನೆಡಲಾಗುತ್ತಿದೆ. ಈ ಹೊತ್ತಲ್ಲೇ ಮುಂಗಾರು ಮಳೆಯ ಸಂದರ್ಭದಲ್ಲಿ ಸಸಿ ನೆಟ್ಟು ಪೋಷಿಸುವ ಕಾರ್ಯವನ್ನು ಕೈಗೆತ್ತಿಕೊಂಡಿರುವ "ಹಸಿರು ವಿಜಯಪುರ" ಸೃಷ್ಟಿ ನಿರೀಕ್ಷಿತವಾಗಿ ಸಾಗಿದೆ.

**ಸಪ್ತಯೋಜನೆ ಆಸರೆ:**

ಕಾರ್ಯಕ್ರಮಕ್ಕೆ ಕರ್ನಾಟಕ ಸಾಮಾಜಿಕ ಅರಣ್ಯ, ಮಹಾತ್ಮ ಗಾಂಧಿ ನರೇಗಾ ಯೋಜನೆ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಹಸಿರು ಕರ್ನಾಟಕ, ಹಸಿರು ಆಯ-ವ್ಯಯ, ನಗರ ಪ್ರದೇಶ ಹಸಿರೀಕರಣ, ರಸ್ತೆ ಬದಿ ನೆಡುತೋಪು ಸೇರಿದಂತೆ ಸಪ್ತಯೋಜನೆಯ ಅನುದಾನಗಳ ಆಸರೆಯಾಗಿದೆ. ಜಿಲ್ಲಾ ಪಂಚಾಯತಿ, ಮಹಾತ್ಮಗಾಂಧಿ ನರೇಗಾ ಯೋಜನೆ ಹಾಗೂ ಇಲಾಖೆಯಲ್ಲಿನ ವಿವಿಧ ಯೋಜನೆಗಳಡಿ ಪ್ರಸ್ತುತ ಸಾಲಿನಲ್ಲಿ ಹೊಸದಾಗಿ 2.49 ಲಕ್ಷ ಸಸಿಗಳನ್ನು ನೆಟ್ಟು ಪೋಷಿಸಲಾಗುತ್ತಿದೆ ಹಾಗೂ ಈಗಾಗಲೇ ನಿರ್ಮಾಣ ಮಾಡಿದ ನೆಡುತೋಪುಗಳನ್ನು ನಿರ್ವಹಿಸಲಾಗುತ್ತಿದೆ.

**ಸಸಿಗಳ ವಿತರಣೆ:**

2023-24 ನೇ ಸಾಲಿಗೆ ಅರಣ್ಯ ಇಲಾಖೆ ವತಿಯಿಂದ ಜಿಲ್ಲೆಯಲ್ಲಿ ಶ್ರೀಗಂಧ, ಹೊಂಗೆ, ಬೇವು, ಸೀತಾಫಲ, ನೆಲ್ಲಿ, ಮಹಾಘನಿ, ಹೆಬ್ಬೇವು, ನಿಂಬೆ, ಕಾಡುಬಾದಾಮಿ, ಸಾಗವಾನಿ, ರಕ್ತಚಂದನ, ಸೇರಿದಂತೆ ಇತರೆ 22 ಬಗೆ-ಯ 2.42 ಲಕ್ಷ ಸಸಿಗಳನ್ನು ಪೋಷಣೆ ಮಾಡಿ 2024-25ನೇ ಸಾಲಿಗೆ ರೈತರಿಗೆ ರಿಯಾಯಿತಿ ದರಗಳಲ್ಲಿ ಸುಮಾರು 2,42,000 ಸಸಿಗಳನ್ನು ವಿತರಿಸಲಾಗಿದೆ.

**ಮಣ್ಣಿನ ಸವಕಳಿ ತಡೆಗೆ ಆಧಾರವಾದ ನೆಡುತೋಪು:**

ವೇಗವಾಗಿ ಬೀಸುವ ಗಾಳಿ, ರಭಸವಾಗಿ ಹರಿಯುವ ನೀರು, ಈ ಎಲ್ಲಾ ಕಾರಣಗಳಿಂದ ಮಣ್ಣಿನ ಸವಕಳಿ ತಡೆಯಲ್ಪಟ್ಟು ಮಣ್ಣಿನ ಫಲವತ್ತತೆ ಹಾಗೆಯೇ ಉಳಿಯುತ್ತದೆ. ಗಿಡಗಳನ್ನು ಬೆಳಸುವುದರಿಂದ ಮಣ್ಣಿನ ಸವಕಳಿ ತಪ್ಪಿಸಲು ಪರಿಣಾಮಕಾರಿಯಾದ ಕ್ರಮವಾಗಿದೆ ಮತ್ತು ಇಳಿಜಾರಿಗೆ ಅಡ್ಡಲಾಗಿ ಸಸಿಗಳನ್ನು ನೆಟ್ಟಿದ್ದರಿಂದ ಮರಗಳ ಬೇರುಗಳು ಮಣ್ಣಿನ ಕಣಗಳನ್ನು ಹಿಡಿದಿಟ್ಟುಕೊಳ್ಳುತ್ತವೆ. ಇದರಿಂದ ಮಣ್ಣಿನ ಸವಕಳಿ ತಪ್ಪುತ್ತದೆ. ಭೌಗೋಳಿಕವಾಗಿ ಅರಣ್ಯ ಪ್ರದೇಶಗಳು ಇಳಿಜಾರಿಗಿದ್ದು ಇಲ್ಲಿನ ಮಣ್ಣು ಮಳೆಗಾಲದಲ್ಲಿ ನೀರಿನ ರಭಸಕ್ಕೆ ಹರಿದು ಕೆರೆ, ಹಳ್ಳಗಳಿಗೆ ಜಾರಿ ಶೇಖರಣೆ ಆಗುತ್ತಿತ್ತು. ಆದರೆ ಇದೀಗ ವಿವಿಧ ಜಾತಿಯ ಗಿಡಗಳ ನೆಡುವುದರಿಂದ ಮಣ್ಣು ಫಲವತ್ತತೆ ಮತ್ತು ಮಣ್ಣಿನ ನೈಸರ್ಗಿಕ ಸವಕಳಿ ತಡೆಯಲು ಸಾಧ್ಯವಾಗಿದೆ.





**ಅಂತರ್ಜಲ ಮಟ್ಟ ಹೆಚ್ಚಿಸಿದೆ:**

ಮಳೆಗಾಲ ಸಮಯದಲ್ಲಿ ಮಳೆಯ ನೀರು ಯಥೇಚ್ಛವಾಗಿ ಹರಿಯದೇ ಬೇರುಗಳ ಮೂಲಕ, ನೆಡುತೋಪುಗಳ ಮತ್ತು ಇಳಿಜಾರು ಪ್ರದೇಶಗಳಲ್ಲಿ ಕಂದಕಗಳು, ತಗ್ಗು ದಿಣ್ಣೆಗಳನ್ನು ನಿರ್ಮಾಣಗೊಂಡಿದ್ದರ ಫಲದಿಂದ ನೀರು ಶೇಖರಣೆಗೊಂಡು ಭೂಮಿಯಲ್ಲಿ ಇಂಗಿ, ಅಂತರ್ಜಲ ಮಟ್ಟ ಹೆಚ್ಚಳವಾಗಿದೆ. ಜೊತೆಗೆ ಅರಣ್ಯ ಪ್ರದೇಶಗಳಲ್ಲಿ ಕಂದಕ ಬದುಗಳು ಮತ್ತು ಚೆಕ್ ಡ್ಯಾಮ್ ಗಳನ್ನು ನಿರ್ಮಿಸಲಾಗಿ, ಅಲ್ಲಲ್ಲಿ ಇಳಿಜಾರಿಗೆ ಅಡ್ಡಲಾಗಿ ಬದುಗಳ ನಿರ್ಮಾಣ, ತಗ್ಗು ಪ್ರದೇಶದಲ್ಲಿ ಹೊಂಡಗಳನ್ನು ನಿರ್ಮಿಸಿ ನೀರಿನ ಶೇಖರಣೆ ಮತ್ತು ಅಂತರ್ಜಾಲದ ಮಟ್ಟ ಹೆಚ್ಚಿಸುವತ್ತ ದಾಪುಗಾಲು ಇಟ್ಟಿದೆ. ಇದ-ರಿಂದ ಸುತ್ತ-ಮುತ್ತಲಿನ ರೈತರ ಕೊಳವೆಬಾವಿ, ಬಾವಿಗಳು ಮತ್ತು ಕೆರೆ-ಕಟ್ಟೆಗಳಲ್ಲಿ ನೀರಿನ ಮಟ್ಟ ಹೆಚ್ಚಿದೆ. ಮಾನ್ಸೂನ್ ಮಾರುತವು ಸರಿಯಾದ ಸಮಯಕ್ಕೆ ಮಳೆ ಸುರಿಸಿದರೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ನೀರು ಸಂಗ್ರಹವಾಗುತ್ತದೆ ಎನ್ನಲಾಗುತ್ತದೆ.

**ಸಸ್ಯ ಕ್ಷೇತ್ರಗಳಲ್ಲಿ ಸಸಿಗಳನ್ನು ಬೆಳೆಸಲು ಅಳವಡಿಸಿರುವ ವಿಶೇಷ ತಂತ್ರಜ್ಞಾನಗಳು ಮತ್ತು ಪ್ರಯತ್ನಗಳು:**

ರಸ್ತೆ ಬದಿಗಳಲ್ಲಿ 25*25 ಅಳತೆಯ ಸಸಿಗಳನ್ನು ನೆಡಲು, ಸಸ್ಯಕ್ಷೇತ್ರಗಳಲ್ಲಿ ಮೊದಲು ಚಿಕ್ಕ ಅಳತೆಯ ಪಾಲಥೀನ ಚೀಲಗಳಲ್ಲಿ ಬೀಜಗಳನ್ನು ನಾಟಿ ಮಾಡಿ ಬೀಜ ಮೋಳಕೆಯೊಡೆದು ಒಂದು ನಿರ್ದಿಷ್ಟವಾದ ಎತ್ತರ ಬರುವವರೆಗೂ ಪಾಲಿ ಹೌಸನಲ್ಲಿ ಬೆಳೆಸಲಾಗುತ್ತದೆ. ಹೀಗೆ ಬೆಳೆದಂತಹ ಸಸಿಗಳನ್ನು 25*25 ಅಳತೆಯ ಎಚ್‌ಡಿಪಿಇ (ಊಆಕಇ) ಚೀಲಗಳಿಗೆ ವರ್ಗಾಯಿಸಿ 15-20 ತಿಂಗಳುಗಳವರೆಗೆ ಸರಿಯಾದ ಪೋಶಕಾಂಶಗಳು ಕಾಲ-ಕಾಲಕ್ಕೆ ನೀರುಣಿಸುವುದರ ಜೊತೆಗೆ ಚೀಲದಲ್ಲಿ ಬೆಳೆದಂತಹ ಕಸವನ್ನು ಸ್ವಚ್ಚಗೊಳಿಸುತ್ತಾ ಸಸಿಗಳಿಗೆ ಪೂರಕ ವಾತಾವರಣ ನಿರ್ಮಿಸುತ್ತವೆ. ಅಲ್ಲದೇ ಸಸಿಗಳು ಎತ್ತರ ಹೋಗುವ ಉದ್ದೇಶದಿಂದ ಆಧಾರ ಕಡ್ಡಿಗಳನ್ನು ನೀಡುತ್ತಾ ಬೆಳೆದಂತಹ ಸಸಿಗಳ ಕೆಳ ಮಟ್ಟದ ರೆಂಬೆ-ಕೊಂಬೆಗಳನ್ನು ಕತ್ತರಿಸುತ್ತೇವೆ. ಸಸಿಗಳು ಒಂದು ಜಾಗದಲ್ಲಿ ಬಹಳ ದಿನಗಳವರೆಗೆ ಇದ್ದರೆ ಇದ್ದ ಸ್ಥಳದಲ್ಲಿಯೇ ಬೇರು ಬಿಡುವ ಸಾಧ್ಯತೆಗಳು ಹೆಚ್ಚಾಗಿರುವುದರಿಂದ ಕಾಲಕಾಲಕ್ಕೆ ಅವುಗಳನ್ನು ಸ್ಥಾನಪಲ್ಲಟ ಮಾಡಲಾಗುವುದು. ಹೀಗೆ ಬೆಳೆದಂತಹ 25*25 ಅಳತೆಯ ಸಸಿಗಳು ಕನಿಷ್ಠ 45-50 ಕೆ.ಜಿ.ಯವರೆಗೆ ಇದ್ದು, ಸಸಿಗಳು ಒಟ್ಟಾ-ರೆಯಾಗಿ 18-24 ತಿಂಗಳವರೆಗೆ ಸಸ್ಯಕ್ಷೇತ್ರಗಳಲ್ಲಿ ನಿರ್ವಹಣೆಗೆ ಮಾತ್ರ ಅವಕಾಶವಿರುತ್ತದೆ.

ಅರಣ್ಯೀಕರಣ ಹೆಚ್ಚಿಸಲು ಕೈಗೊಂಡ ವಿನೂತನ(ವಿಶೇಷ) ಪ್ರಯತ್ನಗಳು:

ವಿಜಯಪುರ ಜಿಲ್ಲೆಯಲ್ಲಿ ಬೆರಳೆಣಿಕೆಯಷ್ಟು ಮಳೆಯ ದಿನಗಳನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ಅಧಿಕ ತಾಪಮಾನ, ಒಣಹವೆಯಂತಹ ವಾತಾವರಣವಿರುತ್ತದೆ. ಅಲ್ಲದೇ ದನ-ಕರುಗಳಿಗೆ ಹಾಗೂ ಆಡು ಮೇಕೆಗಳಿಗೆ ಕಡಿಮೆ ಎತ್ತರದ ಸಸಿಗಳು ಸುಲಭವಾಗಿ ಆಹಾರವಾಗುವ ಸಾಧ್ಯತೆ ಹೆಚ್ಚಿರುತ್ತದೆ. ಆದ ಕಾರಣ, ಹೊಸ ಪ್ರಯತ್ನವಾಗಿ ರಸ್ತೆ ಬದಿಗಳಲ್ಲಿ 25*25 ಅಳತೆಯ ಸಸಿಗಳನ್ನು ನೆಡಲಾಗಿದ್ದು ಅವುಗಳ ಎತ್ತರವು 10 ರಿಂದ 12 ಅಡಿಗಳಷ್ಟು ಇರುವುದರಿಂದ ಕುರಿ-ಮೇಕೆ ಹಾಗೂ ದನ-ಕರುಗಳಿಗೆ ಸುಲಭವಾಗಿ ಆಹಾರವಾಗುವುದಿಲ್ಲ ಮತ್ತು ಸುಮಾರು 18-24 ತಿಂಗಳುಗಳ ಕಾಲ ಸಸ್ಯಪಾಲನಾಲಯದಲ್ಲಿ ಬೆಳೆದು ನಿರ್ವಹಿಸಲ್ಪಡುವುದರಿಂದ 25*25 ಅಳತೆಯ ಸಸಿಗಳನ್ನು ಕ್ಷೇತ್ರಮಟ್ಟದಲ್ಲಿ ನೆಟ್ಟಾಗ ಬಲು ಬೇಗನೆ ಹೊಂದಿಕೊಂಡು ಬದುಕುಳಿಯುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಬ್ಲಾಕ್‌ನಲ್ಲಿ ಕೈಗೊಂಡ ಅರಣ್ಯೀಕರಣ ಕಾಮಗಾರಿಗಳಿಗೆ 14*20 ಅಳತೆಯ ಸಸಿಗಳಿಗೆ ಒಂದು ವೇಳೆ ಬಿದಿರಿನ ಟ್ರೀ-ಗಾರ್ಡ್ ಪೂರೈಕೆ ಇಲಾಖಾವತಿಯಿಂದ ಆದಲ್ಲಿ ಬಿದಿರು ಬೆಳೆಸುವ ರೈತರಿಗೆ ಪ್ರೋತ್ಸಾಹಿಸಿದಂತಾಗುವುದರ ಜೊತೆಗೆ ಬಿದಿರಿನ ಕಲೆಯನ್ನು ನಂಬಿ ಬದುಕುತ್ತಿರುವವರಿಗೂ ಒಂದಡೆ ಆಸರೆಯಾದಂತಾಗುತ್ತದೆ. ಇದರಿಂದ ಅರಣ್ಯ ಇಲಾಖೆ ಪಟ್ಟ ಶ್ರಮಕ್ಕೆ ಒಂದು ಸಾರ್ಥಕತೆ ಇರುತ್ತದೆ.

**ಅನ್ನದಾತನಿಗೆ ವರದಾನ:**

ಅರಣ್ಯೀಕರಣದಿಂದಾಗಿ ಈ ಪ್ರದೇಶದಲ್ಲಿ ಮಣ್ಣಿನ ತೇವಾಂಶ ಹೆಚ್ಚಿಸುವುದಲ್ಲದೆ, ಗಿಡ-ಮರಗಳು ಮೋಡಗಳ ಆಕರ್ಷಣೆಯಿಂದ ಈ ಭಾಗದ ಭೌಗೋಳಿಕ ಪ್ರದೇಶದಲ್ಲಿ ಅತೀ ಹೆಚ್ಚು ಮಳೆ ಬೀಳುವುದು. ರೈತರು ಬೆಳೆದ ಬೆಳೆಗಳಿಗೆ ಸಾಕಷ್ಟು ನೀರು ಮತ್ತು ಬೋರವೆಲ್, ಕೊಳವೆ ಬಾವಿ, ತೆರೆದ ಬಾವಿಗಳು ನೀರಿನ ಪ್ರಮಾಣ ಗಣನೀಯವಾಗಿ ಹೆಚ್ಚಳವಾಗಿದೆ. ಇದರಿಂದ ರೈತರು ಹೆಚ್ಚಿನ ಇಳುವರಿ ಮತ್ತು ಅಧಿಕ ಲಾಭ ಪಡೆಯುತ್ತಿದ್ದಾರೆ.

**– ಶ್ರೀ ರಿಷಿ ಆನಂದ,**
**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,**
**ಜಿಲ್ಲಾ ಪಂಚಾಯತಿ, ವಿಜಯಪುರ**

***

"ಕಳೆದ ವರ್ಷಗಳಿಂದ ಅರಣ್ಯ ಪ್ರದೇಶ, ರಸ್ತೆಬದಿ, ಸಂಘ-ಸಂಸ್ಥೆಗಳಲ್ಲಿ, ಮುಂತಾದವುಗಳಲ್ಲಿ ಸಸಿಗಳನ್ನು ನಾಟಿ ಮಾಡಿ ವಿಜಯಪುರ ಜಿಲ್ಲೆಯಲ್ಲಿ ಕುಂದಿರುವ ಅರಣ್ಯ ಪ್ರದೇಶವನ್ನು ಅಭಿವೃದ್ಧಿಪಡಿಸುವತ್ತ ಅರಣ್ಯ ಇಲಾಖೆಯು ಮಹತ್ವದ ಪಾತ್ರವಹಿಸುತ್ತಿದೆ. ಇದಕ್ಕೆ ಜಿಲ್ಲೆಯಲ್ಲಿ ಎಲ್ಲರ ಸಹಕಾರವೂ ದೊರಕುತ್ತಿದೆ. "

**–ವನೀತಾ. ಆರ್**
**ಉಪ ಅರಣ್ಯ ಸಂರಕ್ಷಣಾಧಿಕಾರಿ,**
**ಸಾಮಾಜಿಕ ಅರಣ್ಯ ವಿಭಾಗ,**



# ನೇಕಾರ ವಸತಿ ಯೋಜನೆಯ ಫಲಾನುಭವಿಗಳ ಆಯ್ಕೆಯಲ್ಲಿ ಗೋಲ್‌ಮಾಲ್

## 40 ಕ್ಕೂ ಅಧಿಕ ಜನ ಅನರ್ಹ ಆಯ್ಕೆಪಟ್ಟಿ ರದ್ದುಗೊಳಿಸಿ, ಅರ್ಹರಿಗೆ ನೀಡಲು ಪುರಸಭೆ ಸದಸ್ಯರ ಒತ್ತಾಯ



**ಮಹಾಲಿಂಗಪುರ :** ದೇವರಾಜ ಅರಸು ವಸತಿ ಯೋಜನೆಯಡಿ ವಸತಿ ಇಲಾಖೆಯು ಕುಶಲ ಕರ್ಮಿ ನೇಕಾರರ ವಸತಿ ರಹಿತರಿಗೆ 2021-22ನೇ ಸಾಲಿನಲ್ಲಿ ಮಂಜೂರಿಯಾದ 100 ಮನೆಗಳಲ್ಲಿ 40ಕ್ಕೂ ಅಧಿಕ ನೇಕಾರರು ಮತ್ತು ಕುಶಲ ಕರ್ಮಿಗಳು ಅಲ್ಲದ ವ್ಯಕ್ತಿಗಳನ್ನು ಆಯ್ಕೆಮಾಡಿ ನೇಕಾರರಿಗೆ ಅನ್ಯಾಯ ಮಾಡಲಾಗಿದೆ. ಜಿಲ್ಲಾಧಿಕಾರಿಗಳು ಮತ್ತು ಜವಳಿ ಇಲಾಖೆ ಉಪ ನಿರ್ದೇಶಕರು ನೇಕಾರ ಕಾಲನಿಯಲ್ಲಿ ಅರ್ಹ ಫಲಾನುಭವಿಗಳನ್ನು ಹೊರತು ಪಡಿಸಿ, ಇನ್ನುಳಿದ 40ಕ್ಕೂ ಅಧಿಕ ಅನರ್ಹ ಫಲಾನುಭವಿಗಳ ಪಟ್ಟಿಯನ್ನು ರದ್ದುಗೊಳಿಸಬೇಕೆಂದು ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ಹಿಟ್ಟಿನಮಠ ಹೇಳಿದರು.
ರವಿವಾರ ಪುರಸಭೆ ಸದಸ್ಯ ಪ್ರಲ್ಹಾದ ಸಣ್ಣಕ್ಕಿ ಅವರ ಕಾರ್ಯಾಲಯದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು ನೇಕಾರ ವೃತ್ತಿಯನ್ನು ಮಾಡದೇ ಇರುವ, ವ್ಯಕ್ತಿಗಳನ್ನು ಆಯ್ಕೆ ಮಾಡಿ ಬಡನೇಕಾರರಿಗೆ ಅನ್ಯಾಯ ಮಾಡಲಾಗಿದೆ. ಜಿಲ್ಲಾಧಿಕಾರಿಗಳು ಮತ್ತು ಜವಳಿ ಇಲಾಖೆ ಉಪನಿರ್ದೇಶಕರು ಈಗಿನ ಆಯ್ಕೆಪಟ್ಟಿಯನ್ನು ರದ್ದುಗೊಳಿಸಿ ಅರ್ಹ ನೇಕಾರರನ್ನು ಆಯ್ಕೆ ಮಾಡಬೇಕೆಂದು ಒತ್ತಾಯಿಸಿದರು.
ಪುರಸಭೆ ಸದಸ್ಯ ಪ್ರಲ್ಹಾದ ಸಣ್ಣಕ್ಕಿ ಮಾತನಾಡಿ ಕುಶಲ ಕರ್ಮಿಗಳ ನೇಕಾರ ವಸತಿ ಯೋಜನೆಯ ಫಲಾನುಭವಿಗಳ ಆಯ್ಕೆಯಲ್ಲಿ ಭಾರಿ ಗೋಲ್‌ಮಾಲ್ ನಡೆದಿದೆ. ಸೌಜನ್ಯ ನೇಕಾರ ಸೊಸೈಟಿಯ ಜಿ.ಎಸ್.ಗೊಂಬಿ ಅವರು ಒಬ್ಬೊಬ್ಬ ಫಲಾನುಭವಿಯಿಂದ ಕನಿಷ್ಠ 20 ರಿಂದ 30 ಸಾವಿರ ಲಂಚ ಪಡೆದು ನೇಕಾರರರು ಅಲ್ಲದ 40ಕ್ಕೂ ಅಧಿಕ ಫಲಾನುಭವಿಗಳಿಗೆ ಮನೆ ಹಂಚಿ ಲಕ್ಷಾಂತರ ಅವ್ಯವಹಾರ ನಡೆಸಿ, ಅರ್ಹ ನೇಕಾರರಿಗೆ ಅನ್ಯಾಯ ಮಾಡಿದ್ದಾರೆ. ನೇಕಾರ ಕಾಲನಿಯಲ್ಲಿನ ಫಲಾನುಭವಿಗಳನ್ನು ಹೊರತುಪಡಿಸಿ ಉಳಿದ 40ಕ್ಕೂ ಅಧಿಕ ಅನರ್ಹ ಪಟ್ಟಿಯನ್ನು ರದ್ದುಗೊಳಿಸಿ, ಅರ್ಹ ನೇಕಾರರಿಗೆ ವಸತಿ ಯೋಜನೆಯ ಸೌಲಭ್ಯ ನೀಡಬೇಕು. ಇಲ್ಲದಿದ್ದರೆ ಬೃಹತ್ ಪ್ರತಿಭಟನೆ ನಡೆಸಲಾಗುವದು ಎಂದು ಪುರಸಭೆ ಮುಖ್ಯಾಧಿಕಾರಿಗಳು, ಜವಳಿ ಇಲಾಖೆ ಉಪನಿರ್ದೇಶಕರು ಮತ್ತು ಜಿಲ್ಲಾಧಿಕಾರಿಗಳಿಗೆ ಆಗ್ರಸಿದರು. ಪುರಸಭೆ ಸದಸ್ಯರಾದ ಬಸವರಾಜ ಚಮಕೇರಿ, ರವಿ ಜವಳಗಿ, ಮುಖಂಡರಾದ ಮಹಾಲಿಂಗ ಮುದ್ದಾಪೂರ, ಚನ್ನಪ್ಪ ರಾಮೋಜಿ, ಚನ್ನಗೀರಿ ಕೆಳಗಡೆ ಸೇರಿದಂತೆ ಹಲವರು ಇದ್ದರು.

# ಸರ್ವಜ್ಞ ವಿದ್ಯಾಪೀಠದಲ್ಲಿ ಕನಕದಾಸರ ಜಯಂತಿ ಆಚರಣೆ



**ತಾಳಿಕೋಟಿ :** ಪಟ್ಟಣದ ಸರ್ವಜ್ಞ ವಿದ್ಯಾಪೀಠ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ದಾಸ ಶ್ರೇಷ್ಠ ಕವಿ ಶ್ರೀ ಕನಕದಾಸರ 537 ನೇ ಜಯಂತಿಯನ್ನು ಸೋಮವಾರ ಆಚರಿಸಲಾಯಿತು.
ಕಾರ್ಯಕ್ರಮದಲ್ಲಿ ಸಂಸ್ಥಾಪಕ ಅಧ್ಯಕ್ಷರಾದ ಸಿದ್ದನಗೌಡ ಮಂಗಳೂರ ಅವರು ಶ್ರೀ ಕನಕದಾಸ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿ ವಿದ್ಯಾಥಿಗಳು ದಾಸ ಶ್ರೇಷ್ಠ ಕವಿಗಳ ಶರಣರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಸಿಕೊಳಬೇಕು ಎಂದರು.
ಕಾರ್ಯಕ್ರಮದಲ್ಲಿ ಮುಖ್ಯಗುರುಗಳಾದ ಸಂತೋಷ ಪವಾರ.ಶಿಕ್ಷಕರಾದ ರಾಜು ಜವಳಗೇರಿ, ದೈಹಿಕ ಶಿಕ್ಷಕರಾದ ಬಸವರಾಜ ಚಳ್ಳಗಿ,ಶಾಂತಗೌಡ ಬಿರಾದಾರ,ಭೀಮನಗೌಡ ಸಾಸನೂರ,ರಸೂಲಸಾ ತುರ್ಕನಗೇರಿ, ರವಿಕುಮಾರ ಮಲ್ಲಾಬಾದಿ,ಮೌಲಾಲಿ ವಾಲಿಕಾರ, ಸಿದ್ದನಗೌಡ ಮೂದನೂರು, ಶರಣಗೌಡ ಕಾಚಾಪುರ. ಸಿದ್ದನಗೌಡ ಚೌದರಿ, ಸಂಜುಕುಮಾರ ಭಜಂತ್ರಿ,ರಮೇಶ ಪಾಸೋಡಿ, ರೂಪಾ ಪಾಟೀಲ, ಶಿವಲೀಲಾ ಚುಂಚನೂರ,ಲಕ್ಷ್ಮಿ ಚುಂಚುರ, ದೇವಿಂದ್ರ ಗುಳೆದ,ಅನಿತಾ ಚೌದ್ರಿ, ಅಂಬುಜಾ ಹಜೇರಿ,ರಾಜಬಿ ಬಿದರಿ,ಕಲ್ಪನಾ ಹಜೇರಿ, ನಾಗರತ್ನ ಮೈಲೇಶ್ವರ, ಹೇಮಾ ಕೊಡೆಕಲ್, ನಾಗಶ್ರೀ ನಾಯಕ, ಶಂಕ್ರಮ್ಮ, ಮೇಘಾ ಪಾಟೀಲ, ಮುಬಿನ ಮುರಾಳ, ತನುಶ್ರೀ ಮಹೇಂದ್ರಕರ,ಸರ್ವ ಗುರು ಬಳಗದವರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# 'ಅಜ್ಞಾನವೆಂಬದು ಕಸ ಸುಜ್ಞಾನವೆಂಬುದು ಬೆಳೆ ಇದ್ದಂತೆ'



**ಕೆಲೂರ :** ಅಜ್ಞಾನವೆಂಬ ಕಸವನ್ನು ಕಿತ್ತೊಗೆದು ಸುಜ್ಞಾನವೆಂಬ ಬೀಜ ಬಿತ್ತಿ ಬೆಳೆತಗೆಯುವರಾಗಿರಿ, ಓದಿ ಗೌರವ ಬಿರುದುಗಳನ್ನು ಸಂಪಾದಿಸಿದಾಗ ಮಾತ್ರ ಸುಜ್ಞಾನ ಸಂಪನ್ನರಾಗಿ ಬಾಳಲು ಸಾಧ್ಯವೆಂದು ಕೆಲೂರ ಶಿವಗಂಗಾ ಕ್ಷೇತ್ರದ ಡಾ,ಮಲಯ ಶಾಂತ ಮುನಿ ದೇಶಿ ಕೇಂದ್ರ ಶಿವಾಚಾರ್ಯ ಶ್ರೀಗಳು ಹೇಳಿದರು.
ಅವರು ಶುಕ್ರವಾರ ಹುಣ್ಣಿಮೆ ಬೆಳಕಲ್ಲಿ ಆರಾಧ್ಯ ದೈವ ಶ್ರೀ ಗುರು ಮಂಟೇಶ್ವರ ಶ್ರೀಮಠದಲ್ಲಿ 263,ನೇ ಪೌರ್ಣಿಮಾ ಧರ್ಮ ಚಿಂತನ ಹಾಗೂ ಕಿತ್ತೂರ ರಾಣಿ ಚೆನ್ನಮ್ಮಳ ಜಯಂತೋತ್ಸವ ಸಂಭ್ರಮ ವಿವಿಧ ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಮಾತನಾಡಿದರು.
ಎಲ್ಲರೂ ಪುಣ್ಯ ಸಂಪಾದಿಸುವವರಾಗಿರಿ, ಪ್ರೀತಿ ವಿಶ್ವಾಸ ಗಳಿಸಿರಿ, ಸಮಾಜದಲ್ಲಿ ಒಳ್ಳೆಯ ವಾತಾವರಣ ನಿರ್ಮಿಸುವುದೇ ಪೂರ್ಣಿಮಾ ಧರ್ಮ ಚಿಂತನದ ಮುಖ್ಯ ಉದ್ದೇಶ, ಲಕ್ಷ ಲಕ್ಷ ಜನ ಇಲ್ಲಿ ಸೇರುವುದು ಮುಖ್ಯವಲ್ಲ, ಲಕ್ಷಕೊಟ್ಟು ಕೇಳುವ ಭಕ್ತರು ಮುಖ್ಯ, ಸಾರ್ಥಕ ಸತ್ಸಂಗ ಸಂಭ್ರಮದಲ್ಲಿ ಸಾಗುವರಾಗಬೇಕು ಎಂದು ಹೇಳಿದರು.
ಧಾರ್ಮಿಕ ಸೇವೆಗೈದ ಗ್ರಾಪಂ ಅಧ್ಯಕ್ಷ ಮಾಲಿಂಗೇಶ ನಾಡಗೌಡರ, ಪ್ರಸಕ್ತ ವರ್ಷದ ಸುವರ್ಣ ಕರ್ನಾಟಕ ಬಾಗಲಕೋಟ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ನಿಂಗಪ್ಪ ಭಜಂತ್ರಿ, ತಾಲೂಕ ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹನುಮಂತ ಭಜಂತ್ರಿ, ಮಲ್ಲಕಂಬ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾದ ಶ್ರೀ ಗುರು ಮಂಟೇಶ್ವರ ಪ್ರೌಢಶಾಲಾ ವಿದ್ಯಾರ್ಥಿನಿ ಕುಮಾರಿ ಭೀಮವ್ವ ಕಬ್ಬರಗಿಯವರನ್ನು ಶ್ರೀಗಳು ಶ್ರೀಮಠದಿಂದ ಗೌರವಿಸಿ ಸನ್ಮಾನಿಸಿದರು. ಮಹಿಳಾ ಬಳಗದವರು ಗೌರಿ ಹುಣ್ಣಿಮೆ ಪ್ರಯುಕ್ತ ಹಾಡುಗಳನ್ನು ಹಾಡಿ ರಂಜಿಸಿದರು
ಡಾ ವಿಶ್ವನಾಥ್ ಹಿರೇಮಠ, ಸಂಯುಕ್ತ ಜನತಾದಳದ ರಾಜ್ಯಾಧ್ಯಕ್ಷ ಡಾ, ಮಲ್ಲಣ್ಣ ನಾಡಗೌಡರ, ಮುಖಂಡ ಮುತ್ತಣ್ಣ ನಾಡಗೌಡರ, ವಜೀರಪ್ಪ ಪೂಜಾರ, ಬಸಪ್ಪ ಚಿಕ್ಕನ್ನವರ,ಶಿವಲಿಂಗಪ್ಪ ಹೂಗಾರ,ರುದ್ರಪ್ಪ ಗುರಿಕಾರ, ಕರಿಯಪ್ಪ ತೋಟಗೇರ, ಮಾಸಪ್ಪ ಕಬ್ಬರಗಿ, ಮುತ್ತಣ್ಣ ಮಂಡಿ, ಧರ್ಮ ವಾಹಿನಿಯ ಎಲ್ಲ ಸಂಘಟಕರು ಉಪಸ್ಥಿತರಿದ್ದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಂಗಪ್ಪ ಹೂಗಾರ ಸ್ವಾಗತಿಸಿ ವಂದಿಸಿದರು. ಪತ್ರಕರ್ತ ಶಂಕರ ಮಂಡಿ ಪ್ರಾರ್ಥಿಸಿದರು.
ಬೆಳಿಗ್ಗೆ ಶ್ರೀ ಗುರು ಮಂಟೇಶ್ವರ ಕರ್ತೃ ಗದ್ದುಗೆಗೆ ವಿಶೇಷ ಪೂಜಾ ವಿಧಿ ವಿಧಾನಗಳು ಜರುಗಿದವು ಅನ್ನದಾಸೋಹದೊಂದಿಗೆ ಸಂಪನ್ನಗೊಂಡಿತು.

# ಶಿಕ್ಷಕರು ಬಡ್ಡಿಪೆರಿಂಗದಲ್ಲಿ ತೊಡಗಿಕೊಂಡು ಯಶಸ್ವಿಗೊಳಿಸಿ



**ಜಮಖಂಡಿ :** ಎ.ಎಸ್.ಎಲ್.ಸಿ.ವ್ಯಾಸಂಗದ ವಿದ್ಯಾರ್ಥಿಗಳಿಗೆ ಬಡ್ಡಿಪೆರಿಂಗ್ ಎಂಬ ನೂತನ ಪ್ರಕ್ರಿಯೆಯಲ್ಲಿ ಶಿಕ್ಷಕರು ಸಕ್ರಿಯವಾಗಿ ತೊಡಗಿಕೊಂಡು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಪ್ರೌಢ ವಿಭಾಗದ ಶಿಕ್ಷಣ ಸಂಯೋಜಕ ಮಹಾಂತೇಶ ಚವ್ಹಾಣ ಹೇಳಿದರು.
ತಾಲೂಕಿನ ಚಿಕ್ಕಪಡಸಲಗಿ ಗದುಗ ತೋಂಟದಾರ್ಯ ವಿದ್ಯಾಪೀಠ ಸಂಸ್ಥೆಯ ಶಿವಶರಣ ಹರಳಯ್ಯ ಸ್ಮಾರಕ ಪ್ರೌಢ ಶಾಲೆಗೆ ಭೇಟಿ ನೀಡಿದ ನಂತರ ಶೈಕ್ಷಣಿಕ ಗುಣಮಟ್ಟದ ಚಟುವಟಿಕೆ ಪರಿಶೀಲಿಸಿ ಎ.ಎಸ್.ಎಲ್.ಸಿ. ಮಕ್ಕಳೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.
ಪ್ರತಿಭಾವಂತ ಪ್ರತಿ ವಿದ್ಯಾರ್ಥಿಯೊಬ್ಬನ ಜೊತೆಗೆ ಕಲಿಕೆಯಲ್ಲಿ ಹಿಂದುಳಿದ ಮೂರು ನಾಲ್ಕು ಮಕ್ಕಳನ್ನು ಸೇರಿಸಿ ಪಠ್ಯ ವಿಷಯದ ಅದ್ಯಯನದಲ್ಲಿ ತಲ್ಲಿನರಾಗುವಂತೆ ನೋಡಿಕೊಳ್ಳಬೇಕು. ಮಕ್ಕಳು ನಿರಂತರ ಓದು, ಬರಹದ ಅಭ್ಯಾಸ ಮಾಡುವದರ ಮೂಲಕ ಮುಂಬರುವ ಎ.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯಲು ಸಾಧ್ಯ. ಈ ದಿಸೆಯಲ್ಲಿ ಬಡ್ಡಿಪೆರಿಂಗಗೆ ಒತ್ತು ನೀಡಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಮುಂದಾಗಬೇಕು. ವಿದ್ಯಾರ್ಥಿ ಜೀವನವೆಂಬುದು ಅಮೂಲ್ಯವಾಗಿದ್ದು ಸಮಯ ವ್ಯರ್ಥ ಮಾಡದೆ ಕ್ರಿಯಾಶೀಲತೆ ಪ್ರಬುದ್ಧತೆ ಹೊಂದಿ ಮಕ್ಕಳು ಶೈಕ್ಷಣಿಕ ಪ್ರಗತಿ ಕಾಣಬೇಕು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಫಲಪ್ರದವಾದ ಯಶಸ್ವಿ ಬದುಕು ರೂಪಿಸಿಕೊಳ್ಳಬೇಕು. ಎ.ಎಸ್.ಎಲ್.ಸಿ. ಪರೀಕ್ಷೆ ಧೈರ್ಯದಿಂದ ಎದುರಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಪರೀಕ್ಷೆಯಲ್ಲಿ ಯಶಸ್ಸು ಪಡೆಯಲು ಎಲ್ಲ ವಿಷಯಗಳ ಪಾಠ, ಪ್ರವಚನಗಳನ್ನು ಸರಿಯಾಗಿ ಅರ್ಥೈಸಿಕೊಂಡು ಶ್ರದ್ಧೆಯಿಂದ ಅಧ್ಯಯನ ಮಾಡಬೇಕು ಎಂದರು.
ಮುಖ್ಯ ಶಿಕ್ಷಕ ಬಸವರಾಜ ಜಾಲೋಜಿ, ಹಿರಿಯ ವಿಶ್ರಾಂತ ಶಿಕ್ಷಕ ಬಸವರಾಜ ಅನಂತಪೂರ, ಜಿ.ಆರ್.ಜಾಧವ, ಲೋಹಿತ ಮಿರ್ಜಿ, ಈರಪ್ಪ ದೇಸಾಯಿ, ಕವಿತಾ ಅಂಬಿ, ಪ್ರಮೀಳಾ ತೇಲಸಂಗ, ಕುಮಾರ ವಾಣಿ ಸಹಿತ ಹಲವರು ಇದ್ದರು.

# ಯುವ ಸಂಭ್ರಮ-2024



**ರಬಕವಿ-ಬನಹಟ್ಟಿ :** ಕನ್ನಡ ಸಂಘದ ಉದ್ಘಾಟನಾ ಸಮಾರಂಭ ನಿಮಿತ್ಯ ವಿಶೇಷ ಕಲಾವಿದರ ತಂಡದೊಂದಿಗೆ ಯುವ ಸಂಭ್ರಮ-2024 ಕಾರ್ಯಕ್ರಮವನ್ನು ನವೆಂಬರ 23 ರಂದು ಸಂಜೆ 4 ಗಂಟೆಗೆ ಬನಹಟ್ಟಿಯ ಎಸ್.ಆರ್.ಎ. ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಶಿವಲಿಂಗ ಗೊಂಬಿಗುಡ್ಡ ತಿಳಿಸಿದರು.
ಬುಧವಾರ ಕಾರ್ಯಕ್ರಮದ ಪರಿಕರಗಳನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಅಂತರಾಜ್ಯ ಮಟ್ಟದ ಗುಂಪು ನೃತ್ಯ ಸ್ಪರ್ಧೆ, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ 'ಸಾಧಕ ರತ್ನ' ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದರು.
ವಿಶೇಷ ಬಹುಮಾನ: ಗುಂಪು ನೃತ್ಯ ಸ್ಪರ್ಧೆಗೆ ಪ್ರಥಮ ಬಹುಮಾನ ಒಂದು ಲಕ್ಷ ರೂ. ಮತ್ತು ಟ್ರೋಫಿ, ದ್ವಿತೀಯ ರೂ. 50 ಸಾವಿರ, ತೃತಿಯ ರೂ. 30 ಸಾವಿರ, ಚತುರ್ಥ ರೂ. 20 ಸಾವಿರ ಗಳೊಂದಿಗೆ ಟ್ರೋಫಿ ನೀಡಲಾಗುವುದೆಂದು ಗೊಂಬಿಗುಡ್ಡ ತಿಳಿಸಿದ್ದು, ಹೆಚ್ಚಿನ ಮಾಹಿತಿಗೆ 9972511996 / 9741083492 ನಂಬರಗಳಿಗೆ ಸಂಪರ್ಕಿಸಬಹುದು.
ಈ ಸಂದರ್ಭದಲ್ಲಿ ಪ್ರಶಾಂತ ನಾಯಕ, ಶಿವಾನಂದ ಕಾಂಬಳೆ, ಪುಟ್ಟುರಾಜ ಶೆಟ್ಟಿ, ಆಕಾಶ ಪಾಲಭಾಂವಿ, ಸಾಗರ ಕದಮ್, ರಮೇಶ ಕಾಂಬಳೆ, ರಾಕೇಶ ಸಿಂಘೆ, ಆಕಾಶ ಛತ್ರಿ, ಸಿದ್ಧರಾಮ ಕಾಂಬಳೆ ಉಪಸ್ಥಿತರಿದ್ದರು.

# ನೇಕಾರರ ಹಕ್ಕೊತ್ತಾಯಗಳಿಗಾಗಿ ಸುವರ್ಣ ಸೌಧ ಚಲೋ



**ರಬಕವಿ-ಬನಹಟ್ಟಿ :** ವೃತ್ತಿಪರ ನೇಕಾರರ ಹಕ್ಕೊತ್ತಾಯಗಳ ಈಡೇರಿಕೆಗಾಗಿ ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘದಿಂದ ಪ್ರತಿಭಟನೆಯ ಮೆರವಣಿಗೆಯನ್ನು ಮುಂಬರುವ ಬೆಳಗಾವಿಯ ಅಧಿವೇಶನದಲ್ಲಿ ಹಮ್ಮಿಕೊಳ್ಳಲಾಗುವುದು. ಹಕ್ಕೊತ್ತಾಯಗಳಿಗೆ ಸುವರ್ಣ ವಿಧಾನ ಸೌಧ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘದ ಅಧ್ಯಕ್ಷ ಶಿವಲಿಂಗ ಟಿರಕಿ ತಿಳಿಸಿದರು.
ಅವರು ಬುಧವಾರ ಇಲ್ಲಿನ ತಹಶೀಲ್ದಾರ್ ಗಿರೀಶ ಸ್ವಾದಿಯವರಿಗೆ ಮನವಿ ಸಲ್ಲಿಸಿ ಮಾತನಾಡಿದರು.
ಆತ್ಮಹತ್ಯೆಗೆ ಒಳಗಾದ ರಾಜ್ಯದ 53 ನೇಕಾರರಿಗೆ ರೂ. 10 ಲಕ್ಷ ಪರಿಹಾರ ನೀಡಬೇಕು. ಕಟ್ಟಡ ಕಾರ್ಮಿಕರಿಗೆ ನೀಡುವ ಸೌಲಭ್ಯಗಳನ್ನು ಕೂಡಾ ನೇಕಾರರಿಗೂ ನೀಡಬೇಕು. ಕೆ.ಎಚ್. ಡಿ. ಸಿ. ಯಲ್ಲಿ ನೂರಾರು ಕೋಟಿ ಅವ್ಯವಹಾರವಾಗಿದೆ. ಇದು ಕೂಡಾ ತನಿಖೆಯಾಗಬೇಕು. ನೇಕಾರರ ವಿದ್ಯುತ್ ಬಿಲ್ ಬಗ್ಗೆ ಸಮಸ್ಯೆಯಾಗಿದ್ದು, ಅದನ್ನು ಕೂಡ ಸರ್ಕಾರ ಬೇಗನೆ ಇತ್ಯರ್ಥ ಗೊಳಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಬೆಳಗಾವಿಯಲ್ಲಿ ನಡೆಯಲಿರುವ ವಿಧಾನ ಸಭೆಯ ಅಧಿವೇಶನದ ಸಂದರ್ಭದಲ್ಲಿ ವಿಕಾಸ ಸೌಧ ಚಲೋ ಕಾರ್ಯಕ್ಕೆ ಕರೆ ನೀಡಲಾಗುವುದು ಎಂದು ಶಿವಲಿಂಗ ಟಿರಕಿ ತಿಳಿಸಿದರು.
ರೈತ ಮುಖಂಡ ಹೊನ್ನಪ್ಪ ಬಿರಡಿ, ಸಂಗಪ್ಪ ಉದಗಟ್ಟಿ, ಆರ್. ಐ. ಹೋಳಗಿ, ಅಶೋಕ ಕರಲಟ್ಟಿ, ಪಿ. ಬಿ. ಸಿಂದಗಿ, ಮಹಾನಿಂಗ ಬರಗಿ, ಬಸವರಾಜ ದಡ್ಡೆನ್ನವರ, ವಿ. ಎ. ಬಾಬಾನಗರ, ಈರಣ್ಣ ಜಾಡಗೌಡ, ಸುಭಾಸ ಇಟ್ನಾಳ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಓಯಾಸಿಸ್ ಜೆಎಸ್‌ಎಸ್ ಸಂಸ್ಥೆ



**ರಬಕವಿ-ಬನಹಟ್ಟಿ :** ಕನ್ನಡ ನಾಡು ನುಡಿಗಾಗಿ ಹೋರಾಡಿದ ಮಹಾನುಭಾವ ತಮ್ಮಣ್ಣಪ್ಪ ಚಿಕ್ಕೋಡಿ ಮತ್ತು ವಚನ ಪಿತಾಮಹ ಡಾ. ಹಳಕಟ್ಟಿಯವರಿಂದ ಏಳೆಂಟು ದಶಕಗಳ ಹಿಂದೆ ಸ್ಥಾಪಿಸಲ್ಪಟ್ಟ ಜನತಾ ಶಿಕ್ಷಣ ಸಂಸ್ಥೆಯು ರಬಕವಿ ಬನಹಟ್ಟಿ ಹಾಗೂ ಸುತ್ತ ಮತ್ತಲಿನ ಗ್ರಾಮೀಣ ಪ್ರದೇಶದಲ್ಲಿರುವ ಬಡ ಪ್ರತಿಭಾವಂತ ಮಕ್ಕಳ ಓಯಾಸಿಸ್ ಆಗಿದ್ದು, ಆಧುನಿಕ ಜಗತ್ತಿಗೆ ಅವಶ್ಯವಿರುವ ಶಿಕ್ಷಣವನ್ನು ನೀಡುತ್ತ ಬಂದಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಬನಹಟ್ಟಿ ಹಿರೇಮಠದ ಶರಣಬಸವ ಶಿವಾಚಾರ್ಯರು ನುಡಿದರು.
ಅವರು ಬುಧವಾರ ಇಲ್ಲಿನ ಜೆ.ಎಸ್.ಎಸ್. ಶಿಕ್ಷಣ ಸಂಸ್ಥೆಯು ನೂತನವಾಗಿ ಆರಂಭಿಸಲಿರುವ ಸಿ.ಬಿ.ಎಸ್.ಸಿ. ಶಾಲೆಯ ಕಟ್ಟಡಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.ಸಂಸ್ಥೆಯ ಕಾರ್ಯಾಧ್ಯಕ್ಷ ಬಸವಂತ ಜಾಡಗೌಡ ಮಾತನಾಡಿ, ಸಂಸ್ಥೆಯ ಆವರಣದಲ್ಲಿ ಒಂದನೆಯ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ಶಿಕ್ಷಣ ನೀಡಲಾಗುತ್ತಿದೆ. ಈ ಭಾಗದ ಸಾವಿರಾರು ಬಡ ಪ್ರತಿಭಾವಂತ ನೇಕಾರ ಮತ್ತು ರೈತರ ಮಕ್ಕಳು ಇಲ್ಲಿ ಶಿಕ್ಷಣ ಪಡೆದುಕೊಳ್ಳುತ್ತಿದ್ದಾರೆ. ವನ್ಯಜೀವಿ ಚಿತ್ರಕಾರ ಜಯವಂತ ಮುನ್ನೊಳ್ಳಿ, ಖ್ಯಾತ ವೈದ್ಯ ಡಾ. ಸ. ಜ.ನಾಗಲೋಟಿಮಠ, ದಕ್ಷ ಪೊಲೀಸ್ ಅಧಿಕಾರಿ ಶಂಕರ ಬಿದರಿ, ಅಂತರರಾಷ್ಟ್ರೀಯ ಗಣಿತ ತಜ್ಞ ವೀರಭದ್ರ ಕುಳ್ಳಿ, ಐ. ಆರ್. ಎಸ್. ಅಧಿಕಾರಿ ಡಾ. ಕಿಶೋರ ಭಟ್ಟಡ, ಹತ್ತಾರು ಕೆ.ಎ.ಎಸ್. ಅಧಿಕಾರಿಗಳು, ನ್ಯಾಯಾಧೀಶರು ಮತ್ತು ಪೊಲೀಸ್ ಅಧಿಕಾರಿಗಳು ಇಲ್ಲಿಯ ವಿದ್ಯಾರ್ಥಿಗಳಾಗಿದ್ದಾರೆ ಎಂದರು.
ಸಂಸ್ಥೆಯ ಅಧ್ಯಕ್ಷ ಬಸವರಾಜ ಭದ್ರನವರ, ಉಪಾಧ್ಯಕ್ಷ ರಾಮಣ್ಣ ಭದ್ರನವರ, ಶಂಕರ ಜಾಲಿಗಿಡದ, ಶ್ರೀಶೈಲ ಯಾದವಾಡ, ದುಂಡಪ್ಪ ಮಾಚಕನೂರ, ಗಂಗಾಧರ ಕೊಕಟನೂರ, ಓಂಪ್ರಕಾಶ ಕಾಬ್ರಾ, ಸುಭಾಸ ಹನಗಂಡಿ, ಘೂಳಪ್ಪ ಮುಳೆಗಾಂವಿ, ಕೆ. ಎಚ್. ಸಿನ್ನೂರ, ಮಂಜುನಾಥ ಬೆನ್ನೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ನಾಗರಿಕ ಸೌಲಭ್ಯ ಕಲ್ಪಿಸಲು ಬದ್ಧ: ಸಿದ್ದು ಸವದಿ



**ರಬಕವಿ-ಬನಹಟ್ಟಿ :** ಸನ್-2024-25 ನೇ ಸಾಲಿನ ಹದಿನೈದನೇ ಹಣಕಾಸು ಯೋಜನೆಯಡಿ ಅನುದಾನದಲ್ಲಿನ ಪ್ಯಾಕೇಜ್- 5 ರ ವಾರ್ಡ ನಂ: 6 ರಲ್ಲಿ ಸುನೀಲ ಆರಗಿ ಮನೆಯಿಂದ ಭಸ್ಮೆ ಮನೆಯವರೆಗೆ ರೂ. 7.50 ಲಕ್ಷ ವೆಚ್ಚದ ಸಿಸಿ ರಸ್ತೆ, ವಾರ್ಡನಂ; 7 ರಲ್ಲಿ ಜಿಗಜಿನ್ನಿ ಮನೆಯಿಂದ ಸುಭಾಸ ಮಂಡಿ ಮನೆಯವರೆಗೆ ರೂ. 90 ಸಾವಿರ ವೆಚ್ಚದ ಸಿಸಿ ರಸ್ತೆ, ವಾರ್ಡ ನಂ : 31 ರಲ್ಲಿ ಬೆಟಗೇರಿ ಲೇಔಟ್ನಲ್ಲಿ ರೂ. 7.48 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಿಸಲು ಶಾಸಕ ಸಿದ್ದು ಸವದಿ ಭೂಮಿ ಪೂಜೆ ನೆರವೇರಿಸಿದರು.
ಈ ವೇಳೆ ಮಾತನಾಡಿದ ಶಾಸಕ ಸಿದ್ದು ಸವದಿ, ನಾಗರಿಕ ಸೌಲಭ್ಯಗಳನ್ನು ಕಲ್ಪಿಸಿ ಜನತೆಗೆ ಮೂಲಭೂತ ಸೌಲಭ್ಯ ಕಲ್ಪಿಸಲು ತಾವು ಬದ್ಧರಾಗಿರುವುದಾಗಿ ನುಡಿದರು. ಸರ್ಕಾರದಲ್ಲಿ ಜನತೆಗೆ ಅಭಿವೃದ್ಧಿ ಹೊಂದಲು ಬೇಕಾದ ಕಾಮಗಾರಿ ನಡೆಸಲು ಅವಕಾಶ ಸಿಗುತ್ತಿಲ್ಲವಾದರೂ ಲಭ್ಯ ಸಂಪನ್ಮೂಲ ಬಳಸಿ, ಸರ್ಕಾರದ ಮೇಲೆ ಒತ್ತಡ ಹೇರಿ ಕ್ಷೇತ್ರದ ಪ್ರಗತಿಗೆ ಅಹರ್ನಿಶಿ ಶ್ರಮಿಸುವ ಭರವಸೆ ನೀಡಿದರು.
ಪೂಜಾ ಕಾರ್ಯ ನಡೆಸಿದ ಸಂದರ್ಭದಲ್ಲಿ ನಗರಾಧ್ಯಕ್ಷೆ ವಿದ್ಯಾ ದಭಾಡಿ, ಉಪಾಧ್ಯಕ್ಷೆ ದೀಪಾ ಗಾಡಿವಡ್ಡರ, ಸ್ಥಾಯಿ ಸಮಿತಿ ಚೇರಮನ್ ಅರುಣ ಬುದ್ನಿ, ರೇಖಾ ರವಿ ಕೊರತೆ,
ಚಿದಾನಂದ ಹೊರಟ್ಟಿ, ಪೌರಾಯುಕ್ತ ಜಗದೀಶ ಈಟಿ, ಸಂಜಯ ತೆಗ್ಗಿ, ಯಲ್ಲಪ್ಪ ಕಟಗಿ, ವಸಂತ ಪವಾರ, ಮುತ್ತಣ್ಣ ಚೌಡಕಿ, ಸದಾಶಿವ ಉಂಕಿ,
ಭೀಮು, ಮಲ್ಲಪ್ಪ ಆರಗಿ, ಮಾರುತಿ ಗಾಡಿವಡ್ಡರ, ರುದ್ರಪ್ಪ ಅರಳಿಕಟ್ಟಿ, ಶಂಕ್ರೆಪ್ಪ ಬೈಲಹೊಂಗಲ, ಶ್ರೀಶೈಲ ಮರೇಗುದ್ದಿ ಸೇರಿದಂತೆ ಅನೇಕ ಪ್ರಮುಖರು ಉಪಸ್ಥಿತರಿದ್ದರು.

# ಉತ್ತಮ ಆಹಾರ ಪದ್ಧತಿಯನ್ನು ಅಳವಡಿಸಿಕೊಳ್ಳಿ



**ರಬಕವಿ-ಬನಹಟ್ಟಿ :** ಇಂದಿನ ವಿದ್ಯಾರ್ಥಿಗಳು ದಿನನಿತ್ಯ ಉತ್ತಮ ಆಹಾರ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಉತ್ತಮ ಆರೋಗ್ಯ ಪಡೆದುಕೊಳ್ಳಲು ಸಾಧ್ಯವಾಗುತ್ತಿದೆ. ಆರೋಗ್ಯಕರ ಸಮಾಜದಿಂದ ಸದೃಢವಾದ ದೇಶವನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ.
ಫಾಸ್ಟ್ ಫುಡ್ ಮತ್ತು ಆರೋಗ್ಯಕ್ಕೆ ತೊಂದರೆಯಾಗುವಂತಹ ಆಹಾರಗಳಿಂದ ದೂರವಿರಬೇಕು ಎಂದು ರಬಕವಿ ಬನಹಟ್ಟಿ ತಹಶೀಲ್ದಾರ್ ಗಿರೀಶ ಸ್ವಾದಿ ತಿಳಿಸಿದರು.
ಅವರು ಮಂಗಳವಾರ ಇಲ್ಲಿನ ತಮ್ಮಣ್ಣಪ್ಪ ಚಿಕ್ಕೋಡಿ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಹಮ್ಮಿಕೊಂಡ ಫುಡ್ ಪೆಸ್ಟ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.
ಪ್ರಾಚಾರ್ಯ ಜಿ. ಆರ್. ಜುನ್ನಾಯ್ಕರ್ ಮಾತನಾಡಿ, ವಿದ್ಯಾರ್ಥಿಗಳು ಪೌಷ್ಠಿಕ ಆಹಾರವನ್ನು ಸೇವನೆ ಮಾಡಬೇಕು. ವಿದ್ಯೆಯಷ್ಟೇ ಉತ್ತಮ ಆಹಾರ ಸೇವನೆಯ ಅಗತ್ಯವಾಗಿದೆ. ಹಣ್ಣು, ಹಸಿರು ತರಕಾರಿ, ಮೊಳಕೆ ಬರಿಸಿದ ಕಾಳುಗಳು ನಮ್ಮ ದೇಹಕ್ಕೆ ಅಗತ್ಯವಾಗಿ ಬೇಕಾಗುತ್ತವೆ. ಆದ್ದರಿಂದ ಇಂಥ ವಸ್ತುಗಳ ಸೇವನೆಗೆ ಆದ್ಯತೆಯನ್ನು ನೀಡಬೇಕು ಎಂದು ತಿಳಿಸಿದರು.
ಗೀತಾ ಸಜ್ಜನ, ಪ್ರಕಾಶ ಕೆಂಗನಾಳ, ಮನೋಹರ ಶಿರಹಟ್ಟಿ, ಸುರೇಶ ನಡೋಣಿ, ಶ್ವೇತಾ ಮಠದ, ವಿಜಯಲಕ್ಷ್ಮಿ ಮಾಚಕನೂರ, ಮಯೂರಿ ಮಂಡಿ, ಎಸ್. ಬಿ. ಉಕ್ಕಲಿ, ರಮೇಶ ಮಾಗುರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಜುಮನಾಳದ ಹರಿ ಮಂದಿರದಲ್ಲಿ ಕಾರ್ತಿಕ ಏಕಾದಶಿ ಆಚರಣೆ



**ವಿಜಯಪುರ :** ಕಾರ್ತಿಕ ಏಕಾದಶಿ ಪ್ರಯುಕ್ತ ನಗರದಿಂದ 9 ಕಿ.ಮಿ ಅಂತರದಲ್ಲಿರುವ ಜುಮನಾಳ ಗ್ರಾಮದಲ್ಲಿನ ಶ್ರೀ ಹರಿ ಮಂದಿರ ರುಕ್ಮಿಣಿ ದೇವಾಲಯದಲ್ಲಿ ಮಂಗಳವಾರ ವಿಶೇಷ ಪೂಜೆ ಅಲ್ಲದೇ ಕಾಕಡಾರತಿ, ಭಜನಾ ಮಂಡಳಿಗಳಿಂದ ಭಜನೆ ಮತ್ತು ಭಗವದ್ಗೀತಾ ಪಠಣ ಮುಂತಾದವುಗಳು ಜರುಗಿದವು.

ಈ ಮಂದಿರವು ಶ್ರೀ ಗುರು ಬಾಬಾಸಾಹೇಬ ಅಜರೇಕರ ಫಡ ಶ್ರೀ ಕ್ಷೇತ್ರ ಪಂಢರಾಪುರದ ಶಾಖೆಯಾಗಿದ್ದು, ಇದನ್ನು ಖ್ಯಾತ ಜೋತಿಷಿ ದಿವಂಗತ ರಮೇಶ ಭಟ್ಟ ಜೋಶಿ (ಜುಮನಾಳಕರ) ಸ್ವಂತ ಖರ್ಚಿನಿಂದ ತಮ್ಮ ಹುಟ್ಟೂರಾದ ಜುಮನಾಳದಲ್ಲಿ 1988 ರಲ್ಲಿ ನಿರ್ಮಿಸಿರುವರು.

ಬೆಳಿಗ್ಗೆಯಿಂದಲೇ ಭಕ್ತಾದಿಗಳು ಮಹಾಪೂರದಂತೆ ದೇವಸ್ಥಾನಕ್ಕೆ ಆಗಮಿಸಿ, ಸಾಲಾಗಿ ನಿಂತು ವಿಠ್ಠಲ ದರ್ಶನ ಪಡೆದು ಧನ್ಯತಾಭಾವ ಅನುಭವಿಸಿದರು.

ದೇವಾಲಯದ ಧರ್ಮದರ್ಶಿ ಕಿರಣಭಟ್ಟ ರಮೇಶ ಭಟ್ಟ ಜೋಶಿ (ಜುಮನಾಳಕರ) ನೇತೃತ್ವದಲ್ಲಿ ಬೆಳಿಗ್ಗೆ ರುಕ್ಮಿಣಿ ಪಾಂಡು ರಂಗ ಮೂರ್ತಿಗೆ ಅಭ್ಯಂಗ ಸ್ನಾನ, ಅಭಿಷೇಕ ಮಾಡಲಾಯಿತು. ಶ್ರೀಕಾಂತ ಭಟ್ಟ ( ಶಂಭು) ಜೋಶಿ ಅವರಿಂದ ಬಳಿಕ ಅಲಂಕಾರ ಪೂಜೆ ಮಂಗಳಾರತಿ ನಡೆದವು.

ಬಳಿಕ ವಿವಿಧ ಮಹಿಳಾ ಭಜನಾ ಮಂಡಳಿಗಳಿಂದ ದೇವರ ನಾಮಗಳನ್ನು ಹಾಡಲಾಯಿತು. ಹಲವಾರು ಭಜನಾ ಮಂಡಳಿಗಳ ಸದಸ್ಯರು ಇದರಲ್ಲಿ ಭಾಗವಹಿಸಿ ತಮ್ಮ ಸಂಗೀತ ಸೇವೆ ಸಲ್ಲಿಸಿದರು. ಮಹಿಳೆಯರ ಕೋಲಾಟ ಭಕ್ತರ ಮನ ಆಕರ್ಷಿಸಿತು. ಸಂಜೆ ವಾರಕರಿ ಸಂಪ್ರದಾಯದ ಭಜನಾ ಕಾರ್ಯಕ್ರಮ ನಿರಂತರವಾಗಿ ರಾತ್ರಿ ಸಂತರ ಜಾಗರಣೆ, ದಿಂಡಿ ಗ್ರಾಮ ಪ್ರದಕ್ಷಿಣೆ ನಡೆದವು. ನಂತರ ಶ್ರೀಮದ್ ಭಗವದ್ಗೀತಾ ಪಠಣವನ್ನು ಭಕ್ತರು ಮಾಡುವ ಮೂಲಕ ಉತ್ಸವಕ್ಕೆ ಕಳೆ ತಂದರು. ಆಗಮಿಸಿದ ಭಕ್ತ ಮಂಡಳಿಗೆಲ್ಲ ದೇವಸ್ಥಾನದ ಪರವಾಗಿ ಫಲಹಾರದ ವ್ಯವಸ್ಥೆ ಮಾಡಲಾಗಿತ್ತು.

ಎಲ್ಲ ಕಾರ್ಯಕ್ರಮಗಳಲ್ಲಿ ರುಕ್ಮಾಂಗದ ಭಡಜಿ, ಅರುಣ ಸೋಲಾಪುರಕರ, ಶಾಮಭಟ್ ಜೋಶಿ, ವಿಲಾಸ ಜೋಶಿ ಅರವಿಂದ ಜೋಶಿ, ಗಣಪತಿ ಭಟ್ ಜೋಶಿ, ಎಂ ಜಿ ಕುಲಕರ್ಣಿ, ಡಾ. ಸಂಜೀವ ದಿಕ್ಷೀತ, ಎಸ್ ಎ ಸಿದ್ಧಾಂತಿ, ಶಂಕರ ಕುಲ ಕರ್ಣಿ (ಗಿರಗಾವಿ), ಅಶೋಕ ಪದಕಿ, ಡಾ. ಅಶೋಕ ನಾಯಕ, ಹಣಮಂತ ಕೆ. ಗುಡಿ, ರಾಘವೇಂದ್ರ ಕುಲಕರ್ಣಿ (ಗಿರಗಾಂವಿ) ಉಲ್ಹಾಸ ಪಾಟೀಲ ಮುಂತಾದವರು ಇದ್ದರು.

# ಅಡುಗೆ ಅನಿಲ ಬಳಕೆಯ ಸುರಕ್ಷತೆ ಮತ್ತು ಜಾಗೃತಿ ಕುರಿತು ತರಬೇತಿ

**ವಿಜಯಪುರ :** ವಿಜಯಪುರ ನಗರದ ದರಬಾರ್ ಸಮೂಹ ಶಿಕ್ಷಣ ಸಂಸ್ಥೆಯ ಶ್ಯಾಮ್ ಶಾಲೆಯಲ್ಲಿ ಇಂದಿರಾ ಭಾರತ್ ಗ್ಯಾಸ್ ವಿತರಕ ವಿಲಾಸ ವ್ಯಾಸ ಮತ್ತು ವಿಜಯಾಂಬ ಭಾರತ್ ಗ್ಯಾಸ್ ವಿತರಕ ಸಚಿನ ಪಟ್ಟಣಶೆಟ್ಟಿಯವರು "ನಮ್ಮ ಅಡುಗೆ, ನಮ್ಮ ಜವಾಬ್ದಾರಿ" ಶೀರ್ಷಿಕೆಯಡಿ ಅಡುಗೆ ಅನಿಲ ಸುರಕ್ಷಾ ಕ್ರಮಗಳ ಬಗ್ಗೆ ಜಾಗೃತಿ ಅಭಿಯಾನವನ್ನು ಏರ್ಪಡಿಸಿದ್ದು,

ಭಾರತ ಗ್ಯಾಸ್ ಕಂಪನಿಯ ವತಿಯಿಂದ ಕರ್ನಾಟಕ ರಾಜ್ಯದ ವ್ಯಾಪಾರ ಅಧಿಕಾರಿ ಆಶೀಶ ಅಗರವಾಲ್ ಅವರು ಅಡುಗೆ ಅನಿಲ ಬಳಕೆಯ ಸುರಕ್ಷತೆಗೆ ಐದು



ಮಾರ್ಗಗಳನ್ನು ತಿಳಿಸಿಕೊಟ್ಟರು. ವಿತರಣೆ ಸಮಯದಲ್ಲಿ ಸಿಲಿಂಡರ್ ಪರೀಕ್ಷೆ ಹಾಗೂ ಪರಿಶೀಲನೆ, ಸ್ಟೋವ್ ಅನ್ನು ಸಿಲಿಂಡರಗಿಂತ ಎತ್ತರಕ್ಕೆ ಇಡುವುದು, ಅಡುಗೆ ಆದ ನಂತರ ರೆಗ್ಯುಲೇಟರ್ ಬಂದ್ ಮಾಡುವುದು, ಲೀಕೇಜ್ ಬಗ್ಗೆ ಎಚ್ಚರಿಕೆ ಹಾಗೂ ಜಾಗೃತಿ ಹಾಗೂ ಯಾವಾಗಲೂ ಸುರಕ್ಷಾ ಬಳಸುವಿಕೆ ಬಗ್ಗೆ ನಿಗಾ ಇವೆಲ್ಲ ಸುರಕ್ಷತೆಯ ಕ್ರಮಗಳ ಬಗ್ಗೆ ವಿವರವಾಗಿ ತಿಳಿಸಿದರು ಕಾರ್ಯಕ್ರಮದ ಕೊನೆಗೆ ಮಕ್ಕಳಿಗೆ ಇದರ ಕುರಿತಾಗಿ ರಸಪ್ರಶ್ನೆ ಏರ್ಪಡಿಸಿ, ಸರಿ ಉತ್ತರ ಕೊಟ್ಟ 15 ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಕೂಡ ಮಾಡಲಾಯಿತು. ಇದೇ ಸಂದರ್ಭದಲ್ಲಿ ಶ್ಯಾಮ್ ಶಾಲೆಯ ಪ್ರಾಂಶುಪಾಲರು, ಶಿಕ್ಷಕರು, ಮತ್ತು ಶಾಲೆಯ ಸಿಬ್ಬಂದಿಗಳು ಸಹ ಉಪಸ್ಥಿತರಿದ್ದರು.

# ನಿಜವಾದ ಜೀವನ ಸಾಥಿ ಶರೀರ: ನಿರಂಜನಶ್ರೀ

**ತಾಳಿಕೋಟೆ :** ಶರೀರ ಎಂಬುದನ್ನು ಅದನ್ನು ಸರಿಪಡಿಸಬಹುದು ಮನಸ್ಸು ಸೂಕ್ಷ ?ಮ ಆದ್ಯಾತ್ಮೀಯ ಯಾತ್ರೆಗೆ ಮೊದಲನೇ ಹೆಜ್ಜೆ ಶರೀರವಾಗಿರಬೇಕು ಶರೀರಕ್ಕೆ ಮಹತ್ವಕೊಟ್ಟಿಲ್ಲಾ ನರಕದ ಬಾಗಿಲು ಎಂದು ತಿಳಿದು ಅದಕ್ಕೆ ಅಪಮಾನ ಮಾಡಿಕೊಳ್ಳುತ್ತಾ ಸಾಗಬಾರದು ಎಲ್ಲಿಯವರೆಗೆ ಜೀವನದಲ್ಲಿ ಬಧುಕುವವರೆಗೆ ಅದು ಸೇವೆ ಮಾಡುತ್ತದೆ ಅದು ಸರಿಯಾಗಿದ್ದರೆ ಜೀವನವೆಂಬುದು ಆನಂದಮಯವಾಗಿರಲು ಸಾದ್ಯವೆಂದು ಖ್ಯಾತ ಆದ್ಯಾತ್ಮೀಕ ಪ್ರವಚನಕಾರರಾದ ಪ.ಪೂ.ಶ್ರೀ ನಿರಂಜನ ಮಹಾ ಸ್ವಾಮಿಗಳು ನುಡಿದರು.

ಮಂಗಳವಾರರಂದು ಯೋಗೋತ್ಸವ ಸಮಿತಿ ತಾಳಿಕೋಟೆ ಇವರ ವತಿಯಿಂದ ಸ್ಥಳೀಯ ಕನ್ನಡ ಶಾಲಾ ಮೈಧಾನದಲ್ಲಿ ಏರ್ಪಡಿಸಲಾದ ಸಾಮೂಹಿಕ ಭಜನೆ, ಹಾಗೂ ಆದ್ಯಾತ್ಮೀಕ ಪ್ರವಚನದ ಪ್ರಾರಂಭೋತ್ಸವದಲ್ಲಿ ನಿಜವಾದ ಜೀವನ ಸಾತಿಯಾಗಿರತಕ್ಕಂತ ಶರೀರ ಕುರಿತು ಆರೋಗ್ಯದ ಮಾತುಗಳನ್ನಾಡಿದ ಶ್ರೀಗಳು ತನುಮನು ಭಾವವೆಂಬುದು ಶುದ್ದವಾಗಿರಬೇಕು ಅಂದರೆ ಭಗವಂತನ ದರ್ಶನವಾಗುತ್ತದೆ ಮೊದಲನೇ ಹಂತ ಶರೀರವಾಗಿದೆ ಎಂದರು. ಅತೀವ ಊಟ, ಅತೀವ ನಿದ್ರೆ, ಕೆಟ್ಟ ಚಟಗಳಿಂದ ಶರೀರವನ್ನು ಹಾಳು ಮಾಡಿಕೊಳ್ಳಬೇಡಿ ಶರೀರವೆಂಬುದು ದೇಗುಲವಾಗಿದೆ ಲೌಕಿಕ, ಆದ್ಯಾತ್ಮೀಕವಾಗಿಯೂ ಸಮಾಜ ಸೇವೆಗೆ ಪರಮಾನಂದ ಪ್ರಾಪ್ತಿಗೂ ಶರೀರವೆಂಬುದು ಚೆನ್ನಾಗಿರಬೇಕೆಂದರು. ಬಸವಣ್ಣನವರು, ಅಕ್ಕಮಹಾದೇವಿ ಅವರು ಹೇಳಿದ ವಚನಗಳನ್ನು ಪ್ರಸ್ತಾಪಿಸಿದ ಅವರು ತಲೆಯಲ್ಲಿ 7 ಕೋಟಿ ನರಗಳಿವೆ ಅವುಗಳನ್ನು ಬಿಡಿಸಿದರೆ ಇಡೀ ಭೂಮಂಡಲವನ್ನೇ ಸುತ್ತಾಕಬಹುದಾಗಿದೆ ಎಂದರು. ಶರೀರಕ್ಕೆ ದೇವಾಲಯವೆಂದು ಪೂಜಿಸಬೇಕು ನಿಜವಾದ ಜೀವನ ಸಾತಿ ಶರೀರವಾಗಿದೆ ಇದು ನಿಮ್ಮ ಸೇವೆಯಲ್ಲಿ ತಾಯಿಯಾದಂತೆ ಸೇವೆ ಮಾಡುತ್ತದೆ ಹೃದಯವೆಂಬುದಕ್ಕೆ ಯಾವ ರೀತಿ ರೆಸ್ಟ, ವಿಶ್ರಾಂತಿ ಎಂಬುದಿಲ್ಲಾವೋ ಆ ರೀತಿ ಮಾನವರಾದ ನಾವು ಹೆಚ್ಚಿಗೆ ಸೇವಾ ಕಾರ್ಯದಲ್ಲಿ ತೊಡಗಬೇಕೆಂದರು.

ಹೃದಯವೆಂಬುದು ಊಟ ಮಾಡಿದ್ದನ್ನು ರಕ್ತವಾಗಿ




ಮಾರ್ಪಡಿಸುತ್ತದೆ ರಕ್ತವೆಂಬುದರ ಕುರಿತು ಸಂಶೋದನೆಗೆ ಇನ್ನೂ ಸಾದ್ಯವಾಗಿಲ್ಲಾವೆಂದರು.

ಅಂಗಾಂಗಗಳು ಹೇಳಿದಂತೆ ಕೇಳುತ್ತವೆ 21 ಸಾವಿರ 600 ಸಲ ಹೃದಯ ಉಸಿರಾಡುತ್ತದೆ ಅದಕ್ಕೆ ಯಾರು ಪ್ರೀತಿ ಎಂಬುದು ತೋರಿಸುತ್ತಿಲ್ಲಾ ಹೃದಯಕ್ಕೆ ಪ್ರೀತಿ ಮಾಡಿದರೆ ಯಾವುದು ಆರೋಗ್ಯದಲ್ಲಿ ಹೇರಾಪೇರಿಯಾಗಲಾರದೆಂದರು.

ಟಿವಿ ಇನ್ನಿತರ ವಿಕ್ಷಣೆ ಮಾಡುವದನ್ನು ಕೈಬಿಡಿ ಅದಕ್ಕೆ ಮಹತ್ವ ನೀಡಿದಂತೆ ಶರೀರಕ್ಕೆ ಮಹತ್ವ ಕೊಡಿ ಇಲ್ಲದಿದ್ದರೆ ಆ ಶರೀರವೆಂಬುದು ಹೇರಾಪೇರಿಯಾಗುತ್ತದೆ ಎಂದರು. ಯೋಗ ಒಂದು ಆಯುರ್ವೇದ ರೋಗ ಬಂದರೆ ಏನು ಮಾಡಬೇಕೆಂಬುದು ತಿಳಿ ಹೇಳುವ ಅದರ ಉದ್ದೇಶವಾಗಿದೆ ಎಂದರು. ಸಾಕ್ಷಾತ್ಕಾರ, ಅಷ್ಟಾಂಗ ಯೋಗದೊಂದಿಗೆ ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳಲು ಯೋಗ ಮತ್ತು ಆಯುರ್ವೇದದ 10 ಸೂತ್ರಗಳನ್ನು ಹೇಳುತ್ತದೆ ಬ್ರಹ್ಮ ಮೋಹರ್ತದಲ್ಲಿ ಏಳಬೇಕು ಅದಕ್ಕೆ ಅಮೃತವೇಳೆ ಎಂದು ಕರೆಯುತ್ತಾರೆ ಆರೋಗ್ಯ ಶಾರೀರಿಕ ಮಾನಸಿಕವಾಗಿ ಚೆನ್ನಾಗಿರಬೇಕಾದರೆ ಬೇಗ ಮಲಗಬೇಕು ಬೇಗ ಏಳಬೇಕು ಅಂದರೆ ಆಮ್ಲಜನಿಕ ಶುದ್ದವಾಗಿ ದೊರೆಯುತ್ತದೆ ಎಂದರು. ಜೀವನದಲ್ಲಿ ಶಾಂತಿ ಆರೋಗ್ಯದಿಂದ ಬಧುಕಬೇಕಾದರೆ ಬೇಗ ಏಳಬೇಕು ಇದರಿಂದ ಏಕಾಗ್ರತೆ ಹೆಚ್ಚಾಗುತ್ತದೆ ಎಂದರು. ಏಳುವ ಸಮಯದಲ್ಲಿ ನಗು ನಗುತ್ತಾ ಏಳಬೇಕು ಬೆಳಿಗ್ಗೆ ರಾತ್ರಿ ಕಡಿಮೆ ಊಟ ಮಾಡಿ ಮಲಗುವ ಮುನ್ನ 1 ಗಂಟೆ ಮೊದಲೇ ಊಟ ಮಾಡಿ ಮೋಬೈಲದಿಂದ ದೂರವಿರಿ ಒಂದು ವಾರದಲ್ಲಿಯೇ ಬದಲಾವಣೆ ಎಂಬುದು ಗೊತ್ತಾಗುತ್ತದೆ ಎಂದು ಭಕ್ತಾಧಿಗಳಿಗೆ ಸಲಹೆ ನೀಡಿದ ಶ್ರೀಗಳು ಮಲಗುವ ಸಮಯದಲ್ಲಿ ದ್ಯಾನ ಮಾಡಿ ಮಲಗಿದರೆ ಮನಸ್ಸು ಜಾಗೃತವಾಗಿರುತ್ತದೆ ಎಂದರು.

ಬ್ರಹ್ಮ ಮೋಹರ್ತದಲ್ಲಿ ಏಳಿ ಬೆಳಿಗ್ಗೆ ಸ್ನಾನ ಮಾಡಿದರೆ ಪರಮಾನಂದಪ್ರಾಪ್ತವಾಗುತ್ತದೆನಂತರಒಂದುಗ್ಲಾಸುನೀರು ಕುಡಿಯಿರಿ ಎಂದು ಹೇಳಿದ ಶ್ರೀಗಳು ಯೋಗ ಪ್ರಾಣಯಾಮ ದ್ಯಾನ ಮಾಡಬೇಕೆಂದು ಹಿಮಾಲಯದ ಯೋಗಿಗಳು ಹೇಳಿದ್ದಾರೆಂದರು. ದಿನಕ್ಕೆ ವಾಕಿಂಗ್ ಎಂಬುದು ಮಾಡಿ ದಿನಕ್ಕೆ 4 ಸಾವಿರ ಹೆಜ್ಜೆ ಇಡಬೇಕೆಂದು ಹೇಳಲಾಗುತ್ತದೆ ಸೂರ್ಯ ಸ್ನಾನ ಮಾಡಿ 20 ನಿಮಿಷ ಸೂರ್ಯನ ಬೆಳಕು ಮೈಮೇಲೆ ಬಿಳ್ಳಬೇಕು ಇದರಿಂದ ಅಂಗಾಂಗದಲ್ಲಿದ್ದ ಉಪಯೋಗವಿರದಂತಹ ಶಕ್ತಿಗಳು ಒಣಗಿ ಹೋಗುತ್ತವೆ ಎಂದರು. ವಾಕಿಂಗ್ ಮಾಡುವದರಿಂದ ಇವೇಲ್ಲವೂ ಲಬಿಸುತ್ತವೆ ಗಿಡಗಳಿದ್ದರೆ ಸ್ವರ್ಗವಿದ್ದಂತೆ ಮನೆಯ ಸುತ್ತಮುತ್ತ ಗಿಡಗಳನ್ನು ಬೆಳೆಯಿಸಿರೆಂದು ಹೇಳಿದ ಶ್ರೀಗಳು ದಿನಕ್ಕೆ 3 ರಿಂದ 4 ಲೀಟರ್ ನೀರು ಕುಡಿಯಬೇಕೆಂದರು.

ಆಹಾರ ಪದ್ದತಿಯಲ್ಲಿ ಹಸಿ ತರಕಾರಿ, ಸಿರಿದಾನ್ಯಗಳನ್ನು ಬಳಿಸಬೇಕು, ಮಡಿಕೆಕಾಳು, ಹಣ್ಣು ಹಂಪಲು ಸೇವಿಸಬೇಕು ಊಟದಲ್ಲಿ ಉಪಯೋಗಿಸಿದರೆ ಯಾವ ಸಮಸ್ಯೆಯೂ ಬರುವದಿಲ್ಲಾವೆಂದರು. ಊಟವೆಂಬುದು ಹಿತಮಿತವಾಗಿರಬೇಕು ಅಂಗಾಂಗಕ್ಕೆ ಕೊಬ್ಬರಿ ಎಣ್ಣೆ ಹಚ್ಚಿಕೊಂಡು ಮಸಾಜ್ ಮಾಡಿಕೊಳ್ಳಿ ಇದಕ್ಕೆ ಅಬ್ಯನ್ನ ಸ್ನಾನವೆನ್ನುತ್ತಾರೆ ಇವೇಲ್ಲವನ್ನು ಸರಿಯಾದ ಸಮಯಕ್ಕನುಸಾರ ಪಾಲನೆ ಮಾಡಬೇಕೆಂದರು. ದುಶ್ಚಟಗಳಿಂದ ದೂರವಿರಬೇಕು ದಿವಸಕ್ಕೆ 6 ರಿಂದ 7ಗಂಟೆ ನಿದ್ರೆ ಮಾಡಿ ಅದು ಕನಸು ರಹಿತ ನಿದ್ರೆ ಮಾಡಿಕೊಳ್ಳಿ ಎಂದು ಶ್ರೀಗಳು 10ಸೂತ್ರಗಳನ್ನು ವಿವರಿಸಿದರಲ್ಲದೇ ಭಜನೆ ಹಾಡುವದರಿಂದ ಉತ್ಸಾಹ ಭರೀತರಾಗಿ ನಗು ನಗುತ್ತಾ ಕಾಲ ಕಳಿಯಿರಿ ಎಂದು ಕಿರು ಕಥೆಯೊಂದನ್ನು ಹೇಳಿ ಭಕ್ತ ಸಮೂಹಕ್ಕೆ ನಕ್ಕು ನಲಿಸಿದರು.

ಈ ಸಮಯದಲ್ಲಿ ಅಸಂಖ್ಯಾತ ಭಕ್ತಸಮೂಹವು ಹಾಗೂ ಯೋಗೋತ್ಸವ ಸಮಿತಿಯ ಪದಾಧಿಕಾರಿಗಳು, ಹಾಗೂ ಸದಸ್ಯರು ಪಾಲ್ಗೊಂಡಿದ್ದರು.

## ಬಸವರಾಜ ದಭಾಡಿ ನಿಧನ



**ಬನಹಟ್ಟಿ:** ಇಲ್ಲಿನ ಮಂಟೂರಯ್ಯ ಮಠದ ನಿವಾಸಿ, ಹಟಗಾರ ಸಮಾಜದ ಯುವಕ ಬಸವರಾಜ ದಭಾಡಿ ತಮ್ಮ 50 ನೆಯ ವಯಸ್ಸಿನಲ್ಲಿ ನವೆಂಬರ 10 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ನೇಣು ಬಿಗಿದು ಯುವಕನ ಕೊಲೆ

**ಬಸವನಬಾಗೇವಾಡಿ :** ಪಟ್ಟಣದ ಜಾಲಿಹಾಳ ತಾಂಡಾಕ್ಕೆ ಹೋಗುವ ರಸ್ತೆ ಬದಿಯ ಹೊಲದಲ್ಲಿ ಯುವಕನೊಬ್ಬನನ್ನು ನೇಣು ಬಿಗಿದು ಕೊಲೆ ಮಾಡಿರುವ ಘಟನೆ ಭಾನುವಾರ ನಡೆದಿದೆ. ಬಾಗೇವಾಡಿಯ ಸುನೀಲ ಶೆಂಕೆಪ್ಪ ಭಜಂತ್ರಿ (23) ಕೊಲೆಯಾದ ಯುವಕ ಎಂದು ಗುರುತಿಸಲಾಗಿದೆ. ಅನೈತಿಕ ಸಂಬಂಧವೇ ಕೊಲೆಗೆ ಕಾರಣವೆನ್ನಾಗಿದ್ದು, ಈ ಸಂಬಂಧ ಸಂತೋಷ ಮುತ್ತಪ್ಪ ಉಕ್ಕಲಿ ಮತ್ತು ಮುದಕಪ್ಪ ಸಂಗಯ್ಯ ಒಡೆಯರ್ ವಿರುದ್ಧ ಪ್ರಕರಣ ದಾಖಲಾಗಿದೆ.

ಸುದ್ದಿ ತಿಳಿದು ಶ್ವಾನದಳ, ಬೆರಳಚ್ಚು ತಜ್ಞರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬಸವನಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

# ರೈತನು ಬೆಳೆದ ಬೆಳೆಗೆ ಉತ್ತಮ ಬೆಲೆ ಸಿಕ್ಕರೆ ನಾಡಿನ ಅಭಿವೃದ್ಧಿ

**ಬೀಳಗಿ :** ಸಕಾಲಕ್ಕೆ ಉತ್ತಮ ಮಳೆಯಾಗಿ ಸಮೃದ್ದಿಭರಿತ ವಾತಾವರಣ ಸೃಷ್ಠಿಯಾಗಿ ನಾಡಿಗೆ ಅನ್ನ ನೀಡುವ ರೈತನ ಜಮೀನುಗಳಲ್ಲಿನಬೆಳೆಉತ್ತಮವಾಗಿಬೆಳೆದು, ಮಾರುಕಟ್ಟೆಯಲ್ಲಿ ರೈತನ ಬೆಳೆಗೆ ಉತ್ತಮ ಬೆಲೆ ಸಿಕ್ಕು ಆತನ ಬದುಕು ಸದಾ ಹಸನಾಗಿ ಉಜ್ವಲವಾಗಿ ಬೆಳೆದರೆ ನಾಡಿನ ಅಭಿವೃದ್ದಿಗೆ ಯಾವುದೇ ತೊಂದರೆಯಾಗುವುದಿಲ್ಲ ಎಂದು ಉಜ್ಜಯನಿ ಮಹಾಪೀಠದ ಶ್ರೀಜಗದ್ಗುರು ಸಿದ್ದಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯ ಭಗವತ್ಪಾದರು ತಿಳಿಸಿದರು.

ತಾಲೂಕಿನ ತೊಳಮಟ್ಟಿ ಗ್ರಾಮದ ಮಲ್ಲಿಕಾರ್ಜುನದೇವರಜಾತ್ರಾಮಹೋತ್ಸವ ಹಾಗೂ ಅಡ್ಡಪಲ್ಲಕ್ಕಿ ಮಹೋತ್ಸವ ಮತ್ತು ಉಚಿತ ಸರ್ವಧರ್ಮ ಸಾಮೂಹಿಕ ವಿವಾಹ,ಬಿರೇಶ್ವರ ದೇವರ ಪಲ್ಲಕ್ಕಿ ಉತ್ಸವ ಸಮಾರಂಭ ಮತ್ತು ರಥೋತ್ಸವ ಸಮಾರಂಭದ ದಿವ್ಯ ಸಾನಿದ್ಯವಹಿಸಿ ಅವರು ಮಾತನಾಡಿದರು.

ಶ್ರಮದಿಂದ ಸಿಗುವ ಆನಂದ ಮತ್ತೆಲಿಯೂ ಸಿಗಲಾರದು,

ರೈತರು,ಜನರು ಮತ್ತು ವ್ಯಾಪಾರಸ್ಥರು ಜೀವನದಲ್ಲಿ ಮಾಡುವ ಕೆಲಸದಲ್ಲಿ ಶ್ರಮವನ್ನು ಅಳವಡಿಸಿಕೊಂಡರೆ

ಅವರ ಬದುಕು ನೆಮ್ಮದಿಯಿಂದ ಕೂಡಿರುತ್ತದೆ ಆದರೆ ಸರಕಾರ ಭಾಗ್ಯಗಳನ್ನು ನೀಡಿ ಶ್ರಮ ಎನ್ನುವ



ಪದಕ್ಕೆ ಅರ್ಥಬಾರದಂತೆ ಮಾಡುವುದು ಸರಿಯಾದ ಕ್ರಮವಲ್ಲ,ಕಾಶಿಯ ತೀರ್ಥಯಾತ್ರೆ,ಶ್ರೀಶೈಲದ ಅದ್ದೂರಿ ಜಾತ್ರೆ ಭಕ್ತ ಸಮೂಹದ ಆಶಯದಂತೆ ಜರುವುದು ಇವೆಲ್ಲಕ್ಕೂ ಶಾಸನಗಳಲ್ಲಿ ವಾಕ್ಯಗಳಿವೆ,ಹಾಗೇಯೆ ಬಾಗಲಕೋಟೆ ಜಿಲ್ಲೆಯ ತೋಳಮಟ್ಟಿ ಗ್ರಾಮದಲ್ಲಿ ಮಲ್ಲಿಕಾರ್ಜುನ ಜಾತ್ರಾ ಮಹೋತ್ಸವನ್ನು ಇಷ್ಟೋಂದು ಅದ್ದೂರಿಯಾಗಿ ಮಾಡುವುದು ಶಿವನು ಮೆಚ್ಚುವ ಕಾರ್ಯ ಮಾಡಿದಂತೆ ಬಾಗಲಕೋಟೆ,ವಿಜಯಪುರ ಭಾಗದ ಜನರು ದುಡಿಮೆಯನ್ನು ನಂಬಿಕೆಯಿಡುವುದರಜತೆಗೆಭಕ್ತಿಯಲ್ಲಿಯೂ ಸರ್ವಧರ್ಮ ಜನರೊಂದಿಗೆ ಮಾಡುವ ಕೆಲಸಗಳು ಪಂಚಪೀಠಗಳ ಸನ್ನಿದಿಗೆ ತೃಪ್ತಿ ತರುವಂತಿವೆ,ಭಕ್ತಿಯಲ್ಲಿಗಟ್ಟಿತನ,ಒಗ್ಗಟ್ಟಿನಲ್ಲಿ ಶ್ರೀಮಂತಿಕೆ ತೋರುವ ಗ್ರಾಮ,ನಗರ ಎಲ್ಲದರಲ್ಲಿಯೂ ಆರೋಗ್ಯವಂತ ವಾತಾರಣವನ್ನು ಹೊಂದಿರುತ್ತದೆ ಎಂದು ಆರ್ಶಿವದಿಸಿದರು.

**ದಾಂಪತ್ಯ ಜೀವನಕ್ಕೆ ಕಾಲಿಟ್ಟ 9 ನವಜೋಡಿ**

ತೊಳಮಟ್ಟಿ ಗ್ರಾಮದ ಸರ್ವಧರ್ಮ ಉಚಿತ ಸಾಮೂಹಿಕ ವಿವಾಹ ಸಮಾರಂಭವನ್ನು ಹಮ್ಮಿಕೊಳ್ಳುವ ಮೂಲಕ ರಾಷ್ಟ್ರೀಯ ಸಂಪತ್ತು ಉಳಿಸುವ ಕೆಲಸ ಮಾಡಲಾಗಿದೆ, ಸಾಮೂಹಿಕ ವಿವಾಹಗಳಲ್ಲಿ ಕೇವಲ ಬಡಜನರು ಮಾತ್ರ ವಿವಾಹ ಆಗುತ್ತಾರೆ ಎನ್ನುವುದು ತಪ್ಪು ಇಂತಹ ವಿವಾಹ ಸಮಾರಂಭದಲ್ಲಿ ವಿವಾಹ ಆಗುವ ದಂಪತಿಗಳ ಜೀವನ ಸುಖಕರವಾಗಿ ಸಾಗುವುದು ಜತೆಗೆ ದೇಶದ ಸಂಪತ್ತು ರಕ್ಷಣೆಯ ಪಾತ್ರದಾರಿಗಳು ನವ ವಧು-ವರರು ಆಗುತ್ತಾರೆ,ದಾಂಪತ್ಯ ಜೀವನಕ್ಕೆ ಕಾಲಿಟ್ಟ ದಂಪತಿಗಳು ತಮ್ಮ ಸುಖ ಸಂಸಾರದೊಂದಿಗೆ ಹಿರಿಯರನ್ನು ತಂದೆ ತಾಯಿಯನ್ನು ಅತ್ತೆ ಮಾವನನ್ನು ಪ್ರೀತಿ ಗೌರವದಿಂದಕಂಡುಆದರ್ಶದಂಪತಿಗಳಾಗಿ ಬದುಕು ಸಾಗಿಸಿ,ಹೆಣ್ಣು ಗಂಡು ಸಂತಾನ ಭಾಗ್ಯವನ್ನು ಪಡೆದುಕೊಂಡು ದೇಶಭಕ್ತ ಮಕ್ಕಳಾಗಿ ಬೆಳೆಸಬೇಕು.

—ಜಗದ್ಗುರು ಸಿದ್ದಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯ ಉಜ್ಜಯಿನಿ.

ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಉಜ್ಜಯನಿ ಶ್ರೀಗಳಅಡ್ಡಪಲ್ಲಕ್ಕಿಉತ್ಸವಸುಮಂಗಲೆಯರ ಆರುತಿ ಕುಂಬ ಮೇಳದೊಂದಿಗೆ ಸಕಲ ವಾದ್ಯ ವೈಭವಗಳೊಂದಿಗೆ ಅದ್ದೂರಿಯಾಗಿ ಜರುಗಿತು, ಸಂಜೆ ಮಲ್ಲಿಕಾರ್ಜುನ ದೇವರ ರಥೋತ್ಸವ ಸಮಾರಂಭವು ಲಕ್ಷಾಂತರ ಭಕ್ತರ ಸಮೂಖದಲ್ಲಿ ಜರುಗಿತು.

ಸಮಾರಂಭದಲ್ಲಿ ಗಿರಿಸಾಗರ ರುದ್ರಮುನಿ ಶಿವಾಚಾರ್ಯರು, ಕಲ್ಮಠದ ಗುರುಪಾದ ಶಿವಾಚಾರ್ಯರು,ಕಲಾದಗಿಯ ಗಂಗಾಧರ ಶಿವಾಚಾರ್ಯರು, ಬಿಲ್‌ಕೆರೂರ ಸಿದ್ದಲಿಂಗ ಶಿವಾಚಾರ್ಯರು, ಮುತ್ತತ್ತಿಯ ಗುರುಲಿಂಗ ಶಿವಾಚಾರ್ಯರು, ಬೀಳಗಿ ಬ್ರಹ್ಮಠದ ಶಿವಾನಂದ ದೇವರು, ಕುಮಾರ ಸ್ವಾಮಿ ಹಿರೇಮಠ ಶ್ರೀಗಳು, ಶಿವಾನಂದ ಬೊಳರಡ್ಡಿ ಸಂತೋಷ ಸಜ್ಜನ ಇತರರು ಮಾತನಾಡಿದರು.

# ಗ್ರಾಮ ಪಂಚಾಯತಿ ಉಪ ಚುನಾವಣೆ: ಮದ್ಯ ಮಾರಾಟ ನಿಷೇಧಿಸಿ ಆದೇಶ

**ವಿಜಯಪುರ :** ಜಿಲ್ಲೆಯ ವಿವಿಧ ಗ್ರಾಮ ಪಂಚಾಯತಿಗಳಿಗೆ ಉಪ ಚುನಾವಣೆ ನಡೆಯಲಿದ್ದು, ಮತದಾನ ನಡೆಯುವ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಮುಂಜಾಗ್ರತಾ ಕ್ರಮವಾಗಿ ಮದ್ಯ ಮಾರಾಟ ನಿಷೇಧಿಸಿ, ಜಿಲ್ಲಾ ದಂಡಾಧಿಕಾರಿಗಳಾದ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಆದೇಶ ಹೊರಡಿಸಿದ್ದಾರೆ.

ವಿವಿಧ ಕಾರಣಗಳಿಂದ ತೆರವಾಗಿರುವ ಜಿಲ್ಲೆಯ ನಿಡಗುಂದಿ ತಾಲೂಕಿನ ಆಲಮಟ್ಟಿ ಗ್ರಾಮ ಪಂಚಾಯತಿಯ ಅರಳದಿನ್ನಿ ಹಾಗೂ ಚಿಮ್ಮಲಗಿ ಗ್ರಾಮ ಪಂಚಾಯತಿಯ ಚಿಮ್ಮಲಗಿ,ಇಂಡಿ ತಾಲೂಕಿನ ಸಾಲೋಟಗಿ ಹಾಗೂ ಖೇಡಗಿ ಗ್ರಾಮ ಪಂಚಾಯತ್, ಬಸವನಬಾಗೇವಾಡಿ ತಾಲೂಕಿನ ವಡವಡಗಿ ಗ್ರಾಮ ಪಂಚಾಯಿತಿಯ ನಾಗರಾಳ ಹುಲಿ, ಮುತ್ತಗಿ ಹಾಗೂ ಬ್ಯಾ-ಕೋಡ ಗ್ರಾಮ ಪಂಚಾಯತಿಯ ಜಯವಾಡಗಿ ಹಾಗೂ ಬಬಲೇಶ್ವರ ತಾಲೂಕಿನ ಬೋಳಚಿಕ್ಕಲಕಿ ಗ್ರಾಮ ಪಂಚಾಯತಿಯ ಕಾತ್ರಾಳ, ವಿಜಯಪುರ ತಾಲೂಕಿನ ಕನ್ನೂರ, ನಾಗಠಾಣ, ಜುಮನಾಳ ಹಾಗೂ ಹೊನಗನಹಳ್ಳಿ ಗ್ರಾಮ ಪಂಚಾಯತಿಗೆ, ಮುದ್ದೇಬಿಹಾಳ ತಾಲೂಕಿನ ಕುಂಟೋಜಿ ಗ್ರಾಮ ಪಂಚಾಯತಿಗೆ, ತಾಳಿಕೋಟೆ ತಾಲೂಕಿನ ಹಿರೂರ ಗ್ರಾಮ ಪಂಚಾಯತಿಯ ತಮದಡ್ಡಿ, ಚಡಚಣ ತಾಲೂಕಿನ ಲೋಣಿ ಬಿ.ಕೆ ಮತ್ತು ಚಡಚಣ ತಾಲೂಕಿನ ಹತ್ತಳ್ಳಿ ವ್ಯಾಪ್ತಿಯಲ್ಲಿ ದಿನಾಂಕ:23-11-2024ರಂದು ಮತದಾನ ನಡೆಯಲಿದೆ. ಮತದಾನ ಮುಕ್ತಾಯವಾಗುವ 48 ಗಂಟೆಗಳ ಮೊದಲಿನ ಅವಧಿಯಲ್ಲಿ ಅಂದರೆ, ದಿನಾಂಕ: 21-11-2024ರ ಸಂಜೆ 5 ಗಂಟೆಯಿಂದ ದಿನಾಂಕ:23-11-2024ರ ಸಂಜೆ 5 ಗಂಟೆಯವರೆಗೆ ಎಲ್ಲ ತರಹದ ಮದ್ಯ ಮಾರಾಟ, ಸಂಗ್ರಹಣೆ ಹಾಗೂ ಶೇಖರಣೆ ಮಾಡುವುದನ್ನು ನಿಷೇಧಿಸಿ ಆದೇಶ ಹೊರಡಿಸಲಾಗಿದೆ.

# ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳು ವರದಾನ



**ಕೃಷ್ಣರಾಜಪೇಟೆ :** ಬಡ ವಿದ್ಯಾರ್ಥಿಗಳ ಶೈಕ್ಷಣಿಕ ವಿಕಾಸಕ್ಕೆ ವಿದ್ಯಾರ್ಥಿ ನಿಲಯಗಳು ವರದಾನವಾಗಿವೆ ಎಂದು ಶಾಸಕ ಹೆಚ್.ಟಿ.ಮಂಜು ಹೇಳಿದರು,

ಅವರು ಕೃಷ್ಣರಾಜಪೇಟೆ ಪಟ್ಟಣದ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯ ಆವರಣದಲ್ಲಿ ನೂತನವಾಗಿ ಆರಂಭವಾದ ಸಾಮಾಜಿಕ ನ್ಯಾಯದ ಹರಿಕಾರ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯವನ್ನು ಲೋಕಾರ್ಪಣೆ ಗೊಳಿಸಿ ಮಾತನಾಡಿದರು._

ಗ್ರಾಮಾಂತರ ಪ್ರದೇಶಗಳು ಸೇರಿದಂತೆ ನೂರಾರು ಕಿಲೋ ಮೀಟರ್ ದೂರದಿಂದ ಪಟ್ಟಣ-ಕ್ಕೆ ವಿದ್ಯಾಭ್ಯಾಸಕ್ಕೆ ಆಗಮಿಸುವ ಬಡ ಹಾಗೂ ಮಧ್ಯಮ ವರ್ಗಕ್ಕೆ ಸೇರಿದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ನೀಡಿ ಆಸರೆಯನ್ನು ಒದಗಿಸುವ ವಿದ್ಯಾರ್ಥಿ ನಿಲಯಗಳು ಕೇಳಿದ್ದನ್ನೆಲ್ಲಾ ನೀಡುವ ಕಾಮಧೇನು ಕಲ್ಪವೃಕ್ಷವಿದ್ದಂತೆ. ಆದ್ದರಿಂದ ವಿದ್ಯಾರ್ಥಿಗಳು ಜೀವನದಲ್ಲಿ ಏನನ್ನಾದರೂ ಸಾಧನೆ ಮಾಡಲೇಬೇಕು ಎಂಬ ಛಲದಿಂದ ಕಷ್ಟಪಟ್ಟು ವ್ಯಾಸಂಗ ಮಾಡಿ,ವಿದ್ಯಾರ್ಥಿಗಳು ಮನಸ್ಸನ್ನು ಅಲ್ಲಿಂದಿಲ್ಲಿ ಹರಿಯಬಿಡದೆ ಏಕಾಗ್ರತೆಯಿಂದ ವ್ಯಾಸಂಗ ಮಾಡಿ ಸಾಧನೆ ಮಾಡಿ ಗುರು ಹಿರಿಯರು ಹಾಗೂ ತಂದೆ ತಾಯಿಗಳ ಕೀರ್ತಿಯನ್ನು ಬೆಳಗಬೇಕು ಎಂದು ಶಾಸಕ ಮಂಜು ಕಿವಿ ಮಾತು ಹೇಳಿದರು._

ವಿದ್ಯಾರ್ಥಿ ನಿಲಯದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲ ಗೊರವಾಲೆ ನಾಗರಾಜ್, ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ಸುಷ್ಮಾ, ಕೃಷ್ಣರಾಜಪೇಟೆ ತಾಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿ ಎಂ.ಎಲ್. ವೆಂಕಟೇಶ್, ನಿಲಯಪಾಲಕರಾದ ಪ್ರದೀಪ್, ಜಗಧೀಶ್, ಚಿರಂಜೀವಿ, ಚೈತ್ರ, ಚಂದ್ರಶೇಖರ್, ಶ್ರುತಿ, ಪುಷ್ಪ, ಗೀತಾ, ಪ್ರಥಮ ದರ್ಜೆ ಸಹಾಯಕಿ ಕೆ.ಸವಿತ, ಮಧುಕುಮಾರ್, ಅನಿಲ್ ಕುಮಾರ್, ವಿಜಯಕುಮಾರ್, ದೀಪಿಕಾ, ಅಧ್ಯಾಪಕ ಮಹಾಲಿಂಗೇಗೌಡ ಮತ್ತಿತರರು ಉಪಸ್ಥಿತರಿದ್ದರು.

**ವರದಿ, ಎಸ್ ರವಿ ಹೊನ್ನೇನಹಳ್ಳಿ**

# ಆಲಮಟ್ಟಿ ಜಲಾಶಯ ಎತ್ತರ ನೀತಿ ನಿಯಮದಿಂದ ಹಾನಿ: ಸರ್ಕಾರಕ್ಕೆ ಎಚ್ಚರಿಕೆ

**ಬೀಳಗಿ :** ಆಲಮಟ್ಟಿ ಜಲಾಶಯ ಎತ್ತರ 524.526 ಮೀಟರ್ವಾಗುವುದರಿಂದ ಆಗುವ ಸಾಧಕ ಭಾದಕ ಮತ್ತು ಸರಕಾರ ಈ ಯೋಜನೆಯ ಕುರಿತಾಗಿ ಕೈಗೊಂಡು ನೀತಿ ನಿಯಮಗಳು ಸಂತ್ರಸ್ಥರ ಪಾಲಿಗೆ ಹಾನಿಯುಂಟು ಮಾಡುತ್ತಿದ್ದು ಕೂಡಲೇ ಸರಕಾರವನ್ನು ಎಚ್ಚರಿಸಲು ಮುಳಗಡೆ ಸಂತ್ರಸ್ಥರು ಹೋರಾಟದ ಸಿದ್ದತೆಯನ್ನು ಮಾಡಿಕೊಳ್ಳಬೇಕಿದೆ ಎಂದು ಮುಳಗಡೆ ಸಂತ್ರಸ್ಥರ ಪರ ಹೋರಾಟಗಾರರು, ಹಿರಿಯರಾದ ಎಸ್ ಟಿ ಪಾಟೀಲ ತಿಳಿಸಿದರು.

ತಾಲೂಕಿನ ಕೊರ್ತಿ ಪುಕೇಂದ್ರದಲ್ಲಿನ ಕಲ್ಮೇಶ್ವರ ದೇವಸ್ಥಾನದ ಸಭಾಭವನದಲ್ಲಿ ಕರೆಯಲಾಗಿದ್ದ ಮುಳಗಡೆ ಸಂತ್ರಸ್ಥರ ಸಮಸ್ಯೆಗಳು, ಸಲಹೆ ಸೂಚನೆಗಳು ಮತ್ತು ಮುಂದಿನ ಹೋರಾಟದರೂಪರೇಷಗಳಸಿದ್ದಪಡಿಸುವಪೂರ್ವಸಿದ್ದತಾ ಸಭೆಯಲ್ಲಿ ಅವರು ಭಾಗವಹಿಸಿ ಮಾತನಾಡಿದರು.

ಆಲಮಟ್ಟಿ ಜಲಾಶಯದ ಹಿನ್ನಿರಿನಿಂದ ಕಳೆದ 20 ವರ್ಷಗಳ ಹಿಂದೆ ಕೈಗೊಂಡಿದ್ದ ಸಂತ್ರಸ್ಥರ ಹೋರಾಟದ ದಾರಿಯಲ್ಲಿ ಈ ಭಾರಿಯೂ ಹೋರಾಟವಾದರೆ ಮಾತ್ರ ಸಂತ್ರಸ್ಥರಿಗೆ ನ್ಯಾಯ ಸಿಗಲಿದೆ, ಕೇವಲ ನಾಲ್ಕಾರು ಜನರು ಸೇರಿಕೊಂಡು ಹೋರಾಟ ಮಾಡುತ್ತೇವೆ ಎಂದಾದರೆ ಇನ್ನು ಮುಂದಿನ 10 ವರ್ಷ ಕಳೆದರು ಯಾವುದೇ ನ್ಯಾಯ ಸಿಗುವುದಿಲ್ಲ, ಅದಕ್ಕಾಗಿ ಈಗಾಗಲೇ ಸಂತ್ರಸ್ಥರು ನೀಡಿರುವ ಸಲಹೆಯಂತೆ ಬರುವ ಮೂರು ದಿನಗಳಲ್ಲಿ ತಾಲೂಕಿನ 20 ಹಳ್ಳಿಗಳಲ್ಲಿ



ಮುಳಗಡೆ ಹೋರಾಟ ಸಮಿತಿಯ ಕನಿಷ್ಠ 20 ಸದಸ್ಯರ ಗ್ರಾಮ ಘಟಕಗಳನ್ನು ಆರಂಭ ಮಾಡಿ ತಾಲೂಕಾ ಘಟಕಕ್ಕೆ ವರದಿ ನೀಡಬೇಕು ಹೀಗೆ ಮಾಡಿದಾಗ ಮಾತ್ರ ಎಲ್ಲರಿಗೂ ಹೋರಾಟದ ರೂಪರೇಷಗಳ ಕುರಿತಾಗಿ ಸಂದೇಶ ನೀಡಿ ಎಲ್ಲರನ್ನು ಕರೆದುಕೊಂಡು ಬೃಹತ್ ಪ್ರಮಾಣದ ಹೋರಾಟ ಮಾಡುವ ಯೋಜನೆ ಹಾಕಿಕೊಳ್ಳಬಹುವುದು, ಈಗಾಗಲೇ ಕೋರ್ಟಿನಲ್ಲಿ ಆವಾರ್ಡ ಆಗಿರುವ ಪ್ರಕರಣಗಳಿಗೆ ಸರಕಾರ ಪರಿಹಾರ ಸಂದಾಯ ಮಾಡಬೇಕು, ಆಲಮಟ್ಟಿ ಜಲಾಶಯ ಎತ್ತರ 522 ಮೀಟರ್ ಆಗುವುದೋ ಅಥವಾ 524 ಮೀಟರ ಎತ್ತರ ಆಗುವುದೋ ಎಂಬ ಗೊಂದಲ ಹೋಗಬೇಕು, ಮತ್ತು ಈಗಾಗಲೇ ಹೊರಡಿಸಿರುವ ಅಸೂಚನೆಗಳನ್ನು ಪೂರ್ಣಗೊಳಿಸಬೇಕು ಎನ್ನುವ ವಿಚಾರಗಳ ಹೋರಾಟದೊಂದಿಗೆ 524.256 ಮೀಟರ್ ವ್ಯಾಪ್ತಿಯಲ್ಲಿ ಮುಳಗಡೆಯಾಗುವ ಭೂಮಿಯನ್ನು ಭೂಸ್ವಾ?ನಪಡಿಸಿಕೊಂಡು ಈಗಿರುವ ಅತಂತ್ರ ಸ್ಥಿತಿಯನ್ನು ಹೊಗಲಾಡಿಸಬೇಕು ಎಂಬ ನಿರ್ಣಯದೊಂದಿಗೆ ಸಂತ್ರಸ್ಥರು ಮುಂದೆ ಸಾಗಬೇಕಿದೆ ಈ ನಿಟ್ಟಿನಲ್ಲಿ ಪಕ್ಷಾತೀತವಾಗಿ ಎಲ್ಲರು ಮುಂದೆ ಬರಬೇಕು ಎಂದರು.

ಮುಳಗಡೆ ಸಂತ್ರಸ್ಥರ ಹೋರಾಟ ಸಮಿತಿ ಅಧ್ಯಕ್ಷ ಅದೃಶ್ಯಪ್ಪ (ಮುತ್ತು)ದೇಸಾಯಿ ಮಾತನಾಡಿ ಈಗಾಗಲೇ ಕಳೆದ ಹಲವು ವರ್ಷಗಳ ಹಿಂದೆ ಸಂತ್ರಸ್ಥರು ಮತ್ತು ಶಾಸಕರಾದ ಜೆ ಟಿ ಪಾಟೀಲ, ಹಿರಿಯರಾದ ಎಸ್ ಆರ್ ಪಾಟೀಲರ ನೇತ್ರತ್ವದಲ್ಲಿ ಸಂತ್ರಸ್ಥರ ಸಮಸ್ಯೆಗಳು ಸರಕಾರದ ಗಮನಕ್ಕೆ ಬರುವಂತಹ ಹೋರಾಟ ಮಾಡಿದ್ದೇವೆ, ಸದ್ಯ ನಮಗೆಲ್ಲರಿಗೂ ನ್ಯಾಯ ಸಂಪೂರ್ಣವಾಗಿ ಸಿಗಬೇಕು ಈ ನಿಟ್ಟಿನಲ್ಲಿ ಹೋರಾಟದ ರೂಪರೇಷ ಮಾಡಿಕೊಂಡು ಸರಕಾರದ ಗಮನಕ್ಕೆ ತಂದು ಸದ್ಯ ಇರುವ ಸಮಸ್ಯೆಗಳ ಪರಿಹಾರಕ್ಕೆ ಎಂತಹ ತ್ಯಾಗವಾದರು ಮಾಡಲು ಸಿದ್ದರಾಗಬೇಕಿದೆ, ದಿ.17ರಂದು ಬಾಗಲಕೋಟೆಗೆ ಸಿಎಂ ಸಿದ್ದರಾಮಯ್ಯನವರು ಆಗಮಿಸಿದ್ದು ಜಿಲ್ಲೆಯ ಎಲ್ಲ ಶಾಸಕ ಸಚಿವರೊಂದಿಗೆ ಅವರ ಸಮಯ ಪಡೆದುಕೊಂಡು ನಮ್ಮ ಸಮಸ್ಯೆಗಳನ್ನು ಅಹವಾಲು ನೀಡಿ ಅವುಗಳನ್ನು ಬಗೆಹರಿಸುವಂತೆಒತ್ತಾಯಮಾಡುವಯೋಜನೆಹಾಕಿದ್ದೇವೆ, ಬರುವ ಅವೇಶನದ ಸಂದರ್ಭದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಸಂಪೂರ್ಣ ಯಶಸ್ವಿಯಾಗಿ ಸಂತ್ರಸ್ಥರಿಗೆ ನ್ಯಾಯ ಸಿಗುವವರಿಗೂ ನಾವು ಬದ್ದರಾಗಿ ಪಕ್ಷಾತೀತವಾಗಿ ಎಲ್ಲ ಸಂಘಟನೆಗಳನ್ನು ಜತೆಗೆ ಸೇರಿಸಿಕೊಂಡು ಹೋರಾಟ ಮಾಡುವ ಗುರಿಯೊಂದಿಗೆ ಸಾಗಬೇಕು ಎಂದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State